ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 27 ಕಡತದ ಸಂಖ್ಯೆ : ....

ವಿಷಯ : ....

ಕಂಡಿಕೆ ಸಂಖ್ಯೆ	~~000027~~ 000127 ಟಿಪ್ಪಣಿ ಮತ್ತು ಆಜ್ಞೆ

ಸದಸ್ಯರು ಕಡತದ ಪುಟ-291ರಿಂದ296ರವರೆಗೆ ನೀಡಿರುವ ದೂರು ಅರ್ಜಿಯು ದಿ ಬಿನ್ನಿ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಸಂಘದ ಅಧ್ಯಕ್ಷರಾದ ಶ್ರೀ.ಸುರೇಶ್ ರವರ ವಿರುದ್ಧವಾಗಿರುವುದು ಈ ಎಲ್ಲಾ ಅಂಶಗಳು ಕಡತದಲ್ಲಿನ ದಾಖಲೆಗಳಿಂದ, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದ ಅಧ್ಯಕ್ಷರಾದ ಶ್ರೀ.ಜಿ.ಧಯಾನಂದಸ್ವಾಮಿ ಮತ್ತು ಕಾರ್ಯದರ್ಶಿರವರಾದ ಎಸ್.ಪಿ.ರಾಜಗೋಪಾಲ್ ರವರ ಹೇಳಿಕೆಗಳಿಂದ, ಇಟಾ ಕಂಪನಿಯ ಹಿರಿಯ ಸಾರ್ವಜನಿಕ ಸಂಪರ್ಕಾಧಿಕಾರಿಯವರಾದ ಶ್ರೀ.ಎ.ಎ.ಸೋಮಯ್ಯರವರ ಹೇಳಿಕೆಯಿಂದ, ಬಿನ್ನಿ ನೌಕರರ ಕೋ ಆಪರೇಟಿವ್ ಹೌಸಿಂಗ್ ಸೊಸೈಟಿಯ ಸದಸ್ಯರಾದ ಕೆ.ಮ್ಯಾಥ್ಯೂಸ್ ಮತ್ತು ಎನ್.ಜಿ.ಗೋಪಣ್ಣರವರ ಜಂಟಿ ಹೇಳಿಕೆಗಳಿಂದ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ನಿಜವೆಂದು ಕಂಡುಬಂದಿರುವುದರಿಂದ ಪ್ರಾಧಿಕಾರದ ಮಾನ್ಯ ಕಾನೂನು ಅಧಿಕಾರಿಗಳ ಅಭಿಪ್ರಾಯ ಪಡೆದು ಬಿ.ಡಿ.ಎ ನಿಯಮಾನುಸಾರ ಮುಂದಿನ ಕ್ರಮವನ್ನು ಕೈಗೊಳ್ಳಬಹುದಾಗಿರುತ್ತದೆ.

ಕಂಡಿಕೆ 165ರಿಂದ ಕಂಡಿಕೆ 201ರವರೆಗಿನ ವರದಿಯನ್ನು ಕಡತದೊಂದಿಗೆ ತಮ್ಮ ಅವಗಾಹನೆಗೆ ಮಂಡಿಸಿದೆ.

ಮುನಿಯಪ್ಪ .ಕೆ .ಎಂ
ಆರಕ್ಷಕ ಉಪ ನಿರೀಕ್ಷಕರು, ಬೆಂ.ಅ.ಪ್ರಾ
6/10/2015

ಜೊತೆಗೆ ಕಾಗದ

202 ಮಾನ್ಯ ಎಸ್.ಪಿ.ರವರಿಗೆ,

OFFICE OF THE SUPERINTENDENT OF POLICE TASK FORCE B.D.A.
No. SC-208
Date 06/10/18

ಕಂಡಿಕೆ-165 ರಿಂದ ಕಂಡಿಕೆ-201ರ ವರೆಗೆ ವರದಿಯನ್ನು ಪರಾಂಭರಿಸುವುದು.

ಕಂಡಿಕೆ-157ರಲ್ಲಿ ಪ್ರಾಧಿಕಾರದ ಕಾರ್ಯದರ್ಶಿಯವರು ಪ್ರಸ್ತಾಪಿಸಿರುವ 1) ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘ. 2) ಬಿನ್ನಿ ಮಿಲ್ ನೌಕರರ ಸಂಘ. 3) ಮೆ॥ಬಿನ್ನಿಮಿಲ್ "ಲಿ". 4) ಇಟಾ ಸಂಘಗಳ ಅಸ್ತಿತ್ವದ ಬಗ್ಗೆ ವಿಚಾರಣೆ ಮಾಡಲಾಗಿ.

1) ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ನೋಂದಣಿ ಸಂಖ್ಯೆ-582/1979-80, ದಿ-01-03-1980 ನೋಂದಣೆಯಾಗಿದ್ದು, ಅಂದಿನಿಂದ ಇಂದಿನವರೆವಿಗೂ ಸಂಘವು ಅಸ್ತಿತ್ವದಲ್ಲಿರುವುದು. ಈ ಸಂಘವು ತನ್ನ 800-ಜಷ್ಟು ಫಲಾನುಭವಿಗಳಿಗೆ E W S ಅಡಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿಸಿಕೊಳ್ಳುವ ಸಂಬಂಧ ಪ್ರಾಧಿಕಾರಕ್ಕೆ ರೂ.22,5,0000/-ಗಳನ್ನು ಸಂದಾಯ ಮಾಡಿ, ಈ ಪೈಕಿ 80 ಫಲಾನುಭವಿಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಿಸಿಕೊಂಡಿದ್ದು, ಈ 80 ನಿವೇಶನಗಳ ಬಾಬ್ತು ರೂ 4,84,000/-ಗಳನ್ನು ಕಡಿತಗೊಳಿಸಿ ಉಳಿಕೆ

31

000448

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

000128

ಟಿಪ್ಪಣಿ ಹಾಳೆಯ ಪುಟ ಸಂಖ್ಯೆ : 211 ಕಡತದ ಸಂಖ್ಯೆ : ....

ವಿಷಯ : ಬಿನ್ನಿಪೇಟೆ ಸೇವಾ ಸಂಘದ ಬಗ್ಗೆ ಪರಿಶೀಲನಾ ವರದಿ

ಕಂಡಿಕೆ ಸಂಖ್ಯೆ	ಟಿಪ್ಪಣಿ ಮತ್ತು ಆಜ್ಞೆ 000128

ಹಂಚಿಕೆ ಮಾಡಲು 05-ಎಕರೆ ಸಗಟು ಜಮೀನನ್ನು ನೀಡಲು ಪ್ರಾಧಿಕಾರದಿಂದ ಆದೇಶವಾಗಿರುವುದು. ಈ ಹಂತದಲ್ಲಿ ಸರ್ಕಾರ ಹಾಗೂ ಪ್ರಾಧಿಕಾರವು ಯಾವುದೋ ಗೊಂದಲದಿಂದಾಗಿ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ಸಗಟಾಗಿ ನೀಡಬೇಕಾಗಿದ್ದ 05-00 ಎಕರೆ ಜಮೀನನ್ನು ಇಟಾ ಕಂಪನಿಗೆ ನೀಡುವಂತೆ ತಪ್ಪಾಗಿ ಆದೇಶವಾಗಿರುತ್ತದೆಂದು. ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ಪ್ರಾಧಿಕಾರಕ್ಕೆ ಪತ್ರ ವ್ಯವಹಾರವನ್ನು ನಡೆಸಿ ಈಗಾಗಲೇ 80-ನಿವೇಶನಗಳನ್ನು ಹಂಚಿಕೆಯಾಗಿ ಪಡೆದಿರುವುದಾಗಿ ಸದರಿ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಯವರ ನೀಡಿರುವ ಹೇಳಿಕೆಗಳಿಂದ ನಿಜವೆಂದು ತಿಳಿದು ಬಂದಿರುತ್ತದೆ.

2) ಮೆ|| ಬಿನ್ನಿ ಮಿಲ್ ಲಿ|| ಸಂಸ್ಥೆಯು ಅಸ್ತಿತ್ವದಲ್ಲಿ ಇಲ್ಲದೇ ಇರುವುದು. ಬಿನ್ನಿ ಮಿಲ್ ನೌಕರರ ಸಂಘ ಈ ಹಿಂದೆ ಅಸ್ತಿತ್ವದಲ್ಲಿದ್ದು. ತನ್ನ ಸಂಘದ ಸದಸ್ಯರಿಗೆ 30•40 ಅಡಿ ಅಳತೆಯನಿವೇಶನಗಳನ್ನು ಹಂಚಿಕೆ ಮಾಡಿದ್ದು. ನಂತರ ಬಿನ್ನಿ ನೌಕರರ ಸಂಘದ ಹೆಸರನ್ನು ಮತ್ತು ನೊಂದಣಿ ಸಂಖ್ಯೆಯನ್ನು ಬದಲಾಯಿಸಿಕೊಂಡಿರುತ್ತದೆ

3) ಮೆ|| ಬಿನ್ನಿ ಮಿಲ್ ಲಿ|| ಸಂಸ್ಥೆಯಲ್ಲಿ ನಿವೃತ್ತರಾದ ಸದಸ್ಯರಿಂದ ದಿ ಬಿನ್ನಿ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಎಂದು ಹೊಸದಾಗಿ ಹೆಸರನ್ನು ನೊಂದಾಯಿಸಿಕೊಂಡಿರುವುದಾಗಿ ಸದರಿ ಸೊಸೈಟಿಯ ಹಿರಿಯ ಸದಸ್ಯರಾದ ಶ್ರೀ ಕೆ.ಮ್ಯಾಥ್ಯೂಸ್ & ಎನ್.ಜಿ.ಗೋಪಣ್ಣರವರ ಹೇಳಿಕೆಗಳಿಂದ ತಿಳಿದು ಬಂದಿರುತ್ತದೆ.

4) ಇಟಾ(ಇ.ಟಿ.ಎ) ಕರ್ನಾಟಕ ಎಸ್ಟೇಟ್ ನಿಯಮಿತ ಇದು ಒಂದು ಸಂಘವಾಗದೇ ಇದ್ದು. ಸಂಸ್ಥೆಯಾಗಿರುವುದು ಈ ಸಂಸ್ಥೆಯ ಮುಖ್ಯ ಉದ್ದೇಶ ಲ್ಯಾಂಡ್ ಡೆವಲಪರ್ಸ್ ಮತ್ತು ಕಟ್ಟಡಗಳ ನಿರ್ಮಾಣದ ಸಂಸ್ಥೆಯಾಗಿರುವುದು. ಸದರಿ ಸಂಸ್ಥೆಗೆ ಪ್ರಾಧಿಕಾರದಿಂದ 5-ಎಕರೆ. 00-02ಗುಂಟೆ ಜಾಗವನ್ನು ಸಗಟಾಗಿ ಹಂಚಿಕೆ ಮಾಡಿ ಅದನ್ನು ದಖಾಗೊಳಿಸಿರುವುದು ಸದರಿ ಸಂಸ್ಥೆಯ ಪಿ.ಆರ್.ಓ. ಶ್ರೀ.ಎ.ಎ.ಸೋಮಯ್ಯರವರ ಹೇಳಿಕೆಯಿಂದ ತಿಳಿದು ಬಂದಿರುತ್ತದೆ. ಈ ಮೇಲಿನ ಸಂಸ್ಥೆಗಳಿಗೂ ಹಾಗೂ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ಪ್ರಾಧಿಕಾರದಲ್ಲಿ ನಡೆಸಿರುವ ಮತ್ತು ನಡೆಸುತ್ತಿರುವ ಪತ್ರ ವ್ಯವಹಾರಗಳಿಗೆ ಯಾವುದೇ ಸಂಬಂಧ ಇಲ್ಲದೇ ಇರುವುದು. ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ಅಸ್ತಿತ್ವದಲ್ಲಿದ್ದು. ಈ ಸಂಘವು ತನ್ನ 800-ಜನ ಫಲಾನುಭವಿಗಳ ಪೈಕಿ 80-ಫಲಾನುಭವಿಗಳಿಗೆ E.W.S.ಅಡಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಿಸಿಕೊಂಡು ಉಳಿಕೆ ಸದಸ್ಯರುಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಿಕೊಡಲು ಪ್ರಾಧಿಕಾರಕ್ಕೆ ಪತ್ರ ವ್ಯವಹಾರ ನಡೆಸಿರುವುದು ದಾಖಲಾತಿಗಳ ಪರಿಶೀಲನೆಯಿಂದ. ವಿಚಾರಣೆಯಿಂದ ತಿಳಿದು ಬಂದಿರುವುದರಿಂದ ಕಂಡಿಕೆ-165 ರಿಂದ ಕಂಡಿಕೆ-201 ರವರೆಗೆ ಪಿ.ಎಸ್.ಐ-2 ರವರು ಪ್ರಸ್ತಾಪಿಸಿರುವ ಎಲ್ಲಾ ಅಂಶಗಳ ಬಗ್ಗೆ ಕಾನೂನು ಅಧಿಕಾರಿಗಳ ಅಭಿಪ್ರಾಯವನ್ನು ಪಡೆದು ನಂತರ ಪ್ರಾಧಿಕಾರದ ನಿಯಮಾನುಸಾರ ಮುಂದಿನ ಕ್ರಮ ಕೈಗೊಳ್ಳಲು ಕೋರಿದೆ.

OFFICE OF THE SUPERINTENDENT OF POLICE B.D.A.

202)

1892
8/X/15

ಆರಕ್ಷಕ ಅಧೀಕ್ಷಕರು

ಕೆ.ಎನ್.ಜಿತೇಂದ್ರನಾಥ್
ಆರಕ್ಷಕ ಅಧೀಕ್ಷಕರು, ಬೆಂ.ಅ.ಪ್ರಾ

ಅನುಬಂಧ-12

<u>ವಿಚಾರಣಾ ವರದಿ</u>

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ ಸಂಘ(ನೋಂ)ದ ಅಧ್ಯಕ್ಷರು ದಿನಾಂಕ;26-04-2018 ರಂದು ಮಾನ್ಯ ಆಯುಕ್ತರವರಿಗೆ ಮತ್ತು ಮಾನ್ಯ ಆರಕ್ಷಕ ಅಧೀಕ್ಷಕರವರಿಗೆ ಬರೆದಿರುವ ಪತ್ರದಲ್ಲಿ, "ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ನಂಬರ್ 53/1ಎ ರಲ್ಲಿ 01 ಎಕರೆ ಜಮೀನನ್ನು ಹಾಗೂ ಸರ್ವೆ ನಂಬರ್ 53/1ಬಿ 01 ಎಕರೆ 35 ಜಮೀನನ್ನು ಒಟ್ಟು 02 ಎಕರೆ 35 ಗುಂಟೆ ಜಮೀನನ್ನು ಪ್ರಾಧಿಕಾರದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್(ರಿ) ಸಂಘದವರಿಗೆ ದಿನಾಂಕ;31-05-2013 ರಂದು ಹಂಚಿಕೆ ಮಾಡಿ, ಜಮೀನಿಗೆ ಸಂಬಂಧಿಸಿದಂತೆ ಸಂಘದವರಿಂದ ಮೊತ್ತವನ್ನು ಪಾವತಿಸಿಕೊಂಡು, ದಿನಾಂಕ;04-06-2013 ರಂದು ಶುದ್ಧಕ್ರಯಪತ್ರವನ್ನು ನೋಂದಾಯಿಸಿ, ಸ್ವಾಧೀನ ಪತ್ರವನ್ನು ನೀಡಿದ್ದು, ಕಾರಣಾಂತರಗಳಿಂದ ಸದರಿ ಜಮೀನನ್ನು ರದ್ದುಪಡಿಸಲಾಗಿರುತ್ತದೆ. ಇದೊಂದು ಸಗಟು ಹಂಚಿಕೆಯಾಗಿದ್ದು, ಇದನ್ನು ಉಪ ಕಾರ್ಯದರ್ಶಿ-1 ರ ವಿಭಾಗದಲ್ಲಿ ನಿರ್ವಹಿಸಲಾಗಿರುತ್ತದೆ. ಆದರೆ ಸದರಿ ಜಮೀನನ್ನು ಉಪ ಕಾರ್ಯದರ್ಶಿ-4 ರ ವಿಭಾಗದವರು ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಸಹ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಸದರಿ ಜಮೀನನ್ನು ನೋಂದಣಿ ಮಾಡಿಕೊಟ್ಟಿದ್ದು, ಒಂದೇ ಜಮೀನಿಗೆ ದಕ್ಷಿಣ ವಿಭಾಗದ ಅಭಿಯಂತರರು ಎರಡು ಬಾರಿ ಖಚಿತ ಅಳತೆ ವರದಿಯನ್ನು ನೀಡಿದ್ದು, ಇದು ಅನುಮಾನಗಳಿಗೆ ಆಸ್ಪದ ನೀಡಿರುತ್ತದೆಂದು ಹಾಗೂ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಹಂಚಿಕೆ ಮಾಡಿರುವ ಜಮೀನಿಗೆ ಸಂಬಂಧಿಸಿದಂತೆ ಸೂಕ್ತ ತನಿಖೆ ನಡೆಸಿ, ಉಪ ಕಾರ್ಯದರ್ಶಿ-4 ವಿಭಾಗದವರ ಹಾಗೂ ದಕ್ಷಿಣ ವಿಭಾಗದ ಸಂಬಂಧಪಟ್ಟ ಅಭಿಯಂತರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು" ಕೋರಿರುತ್ತಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ ಸಂಘ(ನೋಂ)ದವರು ನೀಡಿರುವ ದೂರಿನಂತೆ, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ಸಂಬಂಧಿಸಿದ ಕಡತವನ್ನು ಸಂಬಂಧಪಟ್ಟ ವಿಭಾಗದಿಂದ ವಿಚಾರಣೆಗೆ ಪಡೆದುಕೊಂಡು, ಕಡತದಲ್ಲಿರುವ ದಾಖಲಾತಿಗಳನ್ನು ಪರಿಶೀಲಿಸಿ ನೋಡಲಾಗಿ, ಈ ಕೆಳಕಂಡ ಅಂಶಗಳು ದಾಖಲಾತಿಗಳ ಪರಿಶೀಲನೆಯಿಂದ ಕಂಡುಬಂದಿರುತ್ತದೆ.

1) 1987 ರಲ್ಲಿ ಬೆಂಗಳೂರಿನಲ್ಲಿದ್ದ ಮೆ|| ಬಿನ್ನಿಮಿಲ್ ಲಿಮಿಟೆಡ್ ಎಂಬ ಸಂಸ್ಥೆಯು ಆರ್ಥಿಕ ಸಂಕಷ್ಟದಿಂದ ತುಂಬಾ ನಷ್ಟವನ್ನು ಅನುಭವಿಸಿದ್ದರಿಂದ, ಈ ಸಂಸ್ಥೆಯನ್ನು ಮುಚ್ಚಲು ತೀರ್ಮಾನಿಸಿದ್ದು, ಈ ಸಂಸ್ಥೆಯಲ್ಲಿದ್ದ ನೌಕರರಿಗೆ ನೀಡಲಾಗಿದ್ದ ವಸತಿ ಗೃಹಗಳನ್ನು ಖಾಲಿ ಮಾಡಲು ಆದೇಶಿಸಿದ್ದು, ಇಂತಹ ಸಂದರ್ಭದಲ್ಲಿ ನೌಕರರೆಲ್ಲರೂ ಸೇರಿಕೊಂಡು ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವನ್ನು ಸಂಬಂಧಪಟ್ಟ ನಿಬಂಧಕರ ಕಛೇರಿಯಲ್ಲಿ 1979-80ನೇ ಸಾಲಿನಲ್ಲಿ ನೋಂದಣಿ ಸಂಖ್ಯೆ 582/1979-80 ರಲ್ಲಿ ನೋಂದಣಿ ಮಾಡಿಸಿಕೊಂಡು, ನಿರ್ವಸತಿಕರಾದ ನೌಕರರಿಗೆ 20×30 ಅಡಿ ಉದ್ದಗಲತೆಯ ನಿವೇಶನಗಳನ್ನು ಹಂಚಿಕೆ ಮಾಡಿಕೊಡಬೇಕೆಂದು ಘನ ಸರ್ಕಾರವನ್ನು ಕೋರಿದ್ದು, ಈ ಮನವಿಯನ್ನು ಪರಾಂಭರಿಸಿದ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ನೀಡಿದ್ದ ಸೂಚನೆಯ ಮೇರೆಗೆ ಪ್ರಾಧಿಕಾರವು ದಿನಾಂಕ:23/01/1988 ರಂದು ನಡೆದ ಸಭೆಯ ವಿಷಯ ಸಂಖ್ಯೆ:863 ರಲ್ಲಿ ಈ ಕೆಳಕಂಡಂತೆ ತೀರ್ಮಾನಿಸಿರುತ್ತದೆ.

a) Allotment is made to such of those retired employees who are facing [illegible] eviction due to an order by the Court.

b) Allotment bye made only to those employees who fulfill the conditions of EWS.

c) To recommend to Government to issue directions under Section 65 of the BDA Act 1976.

d) To allot sites in Kamakshipalya

e) Full payment os received in each case as applicable to EWS sites.

2) ಮೇಲ್ಕಂಡ ಪ್ರಾಧಿಕಾರದ ಸಭೆಯ ನಿರ್ಣಯವನ್ನು ಸರ್ಕಾರವು ಪತ್ರ ಸಂಖ್ಯೆ HUD/101/MNX/88 ದಿನಾಂಕ: 18/6/1988 ರಂದು ಅನುಮೋದಿಸುತ್ತಾ, ನಿವೇಶನದ ಹಂಚಿಕೆಯ ಲಾಭವನ್ನು ಬಿನ್ನಿಮಿಲ್ ನ ದಿವಂಗತ ನೌಕರರ ಪತ್ನಿ/ಕಾನೂನುಬದ್ಧ ವಾರಸುದಾರರು, ಬಿನ್ನಿಮಿಲ್ ನ ವಸತಿ ಗೃಹ ತೆರವುಗೊಳಿಸುವಂತೆ ಮಾನ್ಯ ಉಚ್ಚ ನ್ಯಾಯಾಲಯದ ತೆರವಾಜ್ಞೆಯನ್ನು ಎದುರಿಸುತ್ತಿರುವ ನಿವೃತ್ತ ನೌಕರರಿಗೆ ಅನ್ವಯಿಸುವಂತೆ ನಿವೇಶನಗಳನ್ನು ಹಂಚಿಕೆ ಮಾಡಲು ಸೂಚಿಸಿರುತ್ತದೆ.

3) ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಹಾಗೂ ಘನ ರಾಜ್ಯ ಸರ್ಕಾರದ ಆದೇಶದಂತೆ, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರು 750 ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳ ಸಲುವಾಗಿ 80,000/- ರೂಗಳನ್ನು ದಿನಾಂಕ:15-10-1988 ರಂದು ಹಾಗೂ 750 ನಿವೇಶನಗಳಿಗೆ ಮುಂಗಡ ಹಣವಾಗಿ 22,50,000/- ರೂಗಳನ್ನು ದಿನಾಂಕ:09-12-1988 ರಂದು ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ದಿ:27-06-1990 ರಂದು ಪ್ರಥಮ ಹಂತವಾಗಿ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದ 80 ಜನ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಿದ್ದು, ಉಳಿದ ಸದಸ್ಯರಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಪ್ರಾಧಿಕಾರವು ವಿಳಂಬ ಮಾಡಿದ್ದರಿಂದ, ಸಂಘದ ಸದಸ್ಯರು ಪ್ರಾಧಿಕಾರದ ವಿರುದ್ಧ ಕರ್ನಾಟಕ ರಾಜ್ಯದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 28851 ರಿಂದ 900/1992 ರಂತೆ ದಾವೆಯನ್ನು ಹೂಡಿದ್ದು, ಈ ದಾವೆಯಲ್ಲಿ ಮಾನ್ಯ ನ್ಯಾಯಾಲಯವು 3 ತಿಂಗಳೊಳಗಾಗಿ ಸಂಘದ ಸದಸ್ಯರಿಗೆ ನಿವೇಶನಗಳನ್ನು ನೀಡಬೇಕೆಂದು ಪ್ರಾಧಿಕಾರಕ್ಕೆ ನಿರ್ದೇಶನವನ್ನು ನೀಡಿರುತ್ತದೆ.

4) ದಿನಾಂಕ:27-03-1993 ರಂದು ನಡೆದ ಸಭೆಯಲ್ಲಿ ಸಂಘದವರಿಗೆ ಗೋವಿನಾಯಕನಹಳ್ಳಿ ಗ್ರಾಮದ ಸರ್ವೆ ನಂಬರ್ 50 ರಲ್ಲಿ ಸುಮಾರು 100 ಜನ ಬಿನ್ನಿಮಿಲ್ ನಿವೃತ್ತ ಕಾರ್ಮಿಕರಿಗೆ ನಿವೇಶನವನ್ನು ಹಂಚಿಕೆ ಮಾಡಲು ಪ್ರಸ್ತಾಪಿಸಿದ್ದು, ಈ ಸರ್ವೆ ನಂಬರಿನ ಮೇಲೆ ಶ್ರೀಮತಿ ಇಂದಿರಮ್ಮ ರವರು ಮಾನ್ಯ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 7368/1993 ರಲ್ಲಿ ಮಧ್ಯಂತರ ತಡೆಯಾಜ್ಞೆ ಇದ್ದುದರಿಂದ, ಈ ಜಾಗದಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲು ಸಾಧ್ಯವಾಗಿರುವುದಿಲ್ಲ.

5) ಸಂಘದವರಿಗೆ ನಿವೇಶನ ಹಂಚಿಕೆ ಮಾಡುವಲ್ಲಿ ವಿಳಂಬವಾಗಿದ್ದರಿಂದ, ಈ ಬಗ್ಗೆ ಅರ್ಜಿಗಳ ಸಮಿತಿ ಸಭೆಯಲ್ಲಿ ಚರ್ಚಿಸಿದಾಗ ಪ್ರಾಧಿಕಾರದವರು ಸಂಘದ ಸದಸ್ಯರುಗಳಿಗೆ ಇಡಬ್ಲ್ಯೂಎಸ್ ಪ್ರವರ್ಗದಡಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡುವುದಾಗಿ ತಿಳಿಸಿದ್ದು, ಮುಂದುವರೆದು ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:09-01-1995 ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ 23/1995 ರಲ್ಲಿ ಸಂಘದವರು ಬೇಡಿಕೆಯಂತೆ, ಸಂಘದ ಅರ್ಹ ಸದಸ್ಯರಿಗೆ ಬಿ.ಟಿ.ಎಂ 6ನೇ ಹಂತದಲ್ಲಿ 20x30 ಅಡಿ ಉದ್ದಳತೆಯ 30 ನಿವೇಶನವನ್ನು ನೀಡಲು ಹಾಗೂ ಸಂಘದವರ ಕೋರಿರುವಂತೆ 2,61,100/- ರೂಗಳನ್ನು ವಾಪಸ್ಸು ಹಿಂತಿರುಗಿಸಲು ತೀರ್ಮಾನಿಸಿದ್ದು, ಸಂಘದ ತೀರ್ಮಾನದಂತೆ, 2,61,100/- ರೂಗಳನ್ನು ಸಂಘದವರಿಗೆ ವಾಪಸ್ಸು ಹಿಂತಿರುಗಿಸಿರುವ ಬಗ್ಗೆ

ಮಾಹಿತಿ ಇದ್ದು, 30 ನಿವೇಶನಗಳನ್ನು ಹಂಚಿಕೆ ಮಾಡಿರುವ ಬಗ್ಗೆ, ಕಾರ್ಯ ಅನುಷ್ಠಾನಗೊಂಡಿರುವುದು ಕಂಡುಬಂದಿರುವುದಿಲ್ಲ.

6) ಮಾನ್ಯ ನ್ಯಾಯಾಲಯದ ಆದೇಶದಂತೆ ಕ್ರಮಕೈಗೊಳ್ಳುವ ಸಲುವಾಗಿ ಪ್ರಾಧಿಕಾರದ ಮಾನ್ಯ ಅಧ್ಯಕ್ಷರು ದಿನಾಂಕ:09-02-1996 ರಂದು ಸರ್ಕಾರಕ್ಕೆ ಪತ್ರವನ್ನು ಬರೆದು ಮಾನ್ಯ ಉಚ್ಛ ನ್ಯಾಯಾಲಯದ ನಿರ್ದೇಶನದ ಮೇರೆಗೆ, ಬಿನ್ನಿಮಿಲ್ ಸಂಸ್ಥೆಯವರು ವಸತಿ ಸಮುಚ್ಛಯವನ್ನು ನಿರ್ಮಿಸಿ ಅರ್ಹ ನಿವೃತ್ತ ನೌಕರರಿಗೆ ಹಂಚಿಕೆ ಮಾಡುವ ಉದ್ದೇಶಕ್ಕಾಗಿ 3 ಎಕರೆ ಜಮೀನನ್ನು ಹಂಚಿಕೆ ಮಾಡುವ ಬಗ್ಗೆ ಪ್ರಸ್ತಾವನೆ ಕಳುಹಿಸಿದ್ದು, ಸದರಿ ಪ್ರಸ್ತಾವನೆಯಲ್ಲಿ ಮೇಲ್ಕಂಡ 4 ಮತ್ತು 5ನೇ ಅಂಶಗಳನ್ನು ಉಲ್ಲೇಖಿಸಿದರ ಮೇರೆಗೆ ಸರ್ಕಾರವು ಪತ್ರ ಸಂಖ್ಯೆ HUD/118/MNX/94 ದಿನಾಂಕ:16/03/1996 ರ ಪತ್ರದಲ್ಲಿ, **ಪ್ರಾಧಿಕಾರದ ಸಗಟು ಹಂಚಿಕೆ ನಿಯಮ-1995 ರನ್ವಯ ಬಿನ್ನಿ ಮಿಲ್ ಲಿಮಿಟೆಡ್ ರವರು ಅವರ ಕಾರ್ಮಿಕರ ಸಂಘಕ್ಕೆ ಯೋಜಿತ ಸಮೂಹ ವಸತಿಯೋಜನೆಯಡಿಯಲ್ಲಿ ವಸತಿ ಗೃಹಗಳನ್ನು ನಿರ್ಮಿಸಿ ಅರ್ಹ ಕಾರ್ಮಿಕರಿಗೆ ನೀಡುವ ಸಲುವಾಗಿ 5 ಎಕರೆ ಜಮೀನನ್ನು ಸಗಟು ಹಂಚಿಕೆ ಮಾಡುವ ಅನುಮೋದನೆ ನೀಡಿರುತ್ತದೆ.** ಈ ಕೆಲಸವು ಕಾರ್ಯಗತವಾಗದೇ ಇದ್ದುದರಿಂದ, ದಿನಾಂಕ:01-06-1996 ರಂದು ಮಾನ್ಯ ಅಧ್ಯಕ್ಷರಾದ ಶ್ರೀ.ಪಿ.ಎಸ್.ಎಸ್.ಥಾಮಸ್ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ವಿಷಯ ಸಂಖ್ಯೆ.03 ರಲ್ಲಿ ಚರ್ಚಿಸಿ, ಸರ್ಕಾರದ ಆದೇಶದಂತೆ 05 ಎಕರೆ ಜಮೀನನ್ನು ವಳಗೇರಹಳ್ಳಿ ಗ್ರಾಮದ ಸರ್ವೆ ನಂಬರ್ 65 ರಿಂದ 68 ರಲ್ಲಿನ ಜಮೀನನ್ನು ಮೆ|| ಬಿನ್ನಿಮಿಲ್ ಲಿಮಿಟೆಡ್ ರವರ ಪರವಾಗಿ ಸಗಟು ಹಂಚಿಕೆ ಮಾಡಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಮೆ|| ಬಿನ್ನಿಮಿಲ್ ಲಿಮಿಟೆಡ್ ರವರು ದಿನಾಂಕ:06-12-1996 ರಂದು ಮತ್ತು ದಿನಾಂಕ:14-02-1997 ರಂದು ಪ್ರಾಧಿಕಾರದ ಮಾನ್ಯ ಆಯುಕ್ತರವರಿಗೆ ಪತ್ರವನ್ನು ಬರೆದು, ಅನುಮೋದನೆಯಾಗಿರುವಂತೆ ಸಗಟು ಹಂಚಿಕೆ ಮಾಡಲು ಕೋರಿರುತ್ತಾರೆ.

7) ಮೆ|| ಬಿನ್ನಿಮಿಲ್ ಲಿಮಿಟೆಡ್ ರವರಿಗೆ ವಳಗೇರಹಳ್ಳಿ ಗ್ರಾಮದ ಸರ್ವೆ ನಂಬರ್ 113, 18/2 & 18/3 ರಲ್ಲಿನ ಜಮೀನನ್ನು ಸಗಟು ಹಂಚಿಕೆ ಮಾಡಲು ದಿನಾಂಕ:04-04-1997 ರಂದು ನಡೆದ ಸಭೆಯ ವಿಷಯ ಸಂಖ್ಯೆ 102/1997 ರಲ್ಲಿ ಚರ್ಚಿಸಿ, ಸಭೆಯ ತೀರ್ಮಾನದಂತೆ,

a) ವಳಗೇರಹಳ್ಳಿ ಗ್ರಾಮದ ಸರ್ವೆ ನಂಬರ್ 113, 18/2 & 18/3 ರಲ್ಲಿನ ಜಮೀನನ್ನು ಬಿನ್ನಿಮಿಲ್ ನಿಯಮಿತರವರ ಪರವಾಗಿ ಸಗಟು ಹಂಚಿಕೆ ಮಾಡಲು,

b) & c) ಆರ್ಥಿಕ ಸದಸ್ಯರ ವಿಭಾಗದವರು ಲೆಕ್ಕಾಚಾರ ಮಾಡಿದಂತೆ, ಸಂಘದವರು ಸಂದಾಯ ಮಾಡಿದ್ದ ರೂ.22,50,000/- ಗಳ ಪೈಕಿ ಹಂಚಿಕೆ ಮಾಡಲಾಗಿದ್ದ 80 ನಿವೇಶನಗಳ ಬಾಬ್ತು ರೂ.4,84,000/- ಗಳನ್ನು ಹೊರತುಪಡಿಸಿ ಬಾಕಿ ರೂ.17,66,000/- ಗಳು ಪ್ರಾಧಿಕಾರದ ಬಳಿಯಿದ್ದು, ಮೇಲ್ಕಂಡ ಜಮೀನಿಗೆ ಸಂಘದವರು ಪಾವತಿ ಮಾಡಬೇಕಾಗಿರುವ ಒಟ್ಟು ರೂ.23,93,409/- ಗಳಲ್ಲಿ, ಪ್ರಾಧಿಕಾರದ ಬಳಿಯಿರುವ ರೂ.17,66,000/- ಗಳನ್ನು ಕಳೆದು ರೂ.6,27,409/-ಗಳನ್ನು ಹಾಗೂ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರು ನೌಕರರಿಗೆ ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿದ್ದುದರಿಂದ ಅಂತಹವರಿಗೆ ಮರುಪಾವತಿ ಮಾಡುವ ಸಲುವಾಗಿ ದಿನಾಂಕ:9/1/1995 ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ 23/95 ರಲ್ಲಿ ತೆಗೆದುಕೊಂಡ ತೀರ್ಮಾನದಂತೆ ಈಗಾಗಲೇ ಸಂಘದವರು ವಾಪಸ್ಸು ಪಡೆದುಕೊಂಡಿರುವ 2,61,100/-ರೂಗಳನ್ನು ಸೇರಿದಂತೆ, ಒಟ್ಟು 8,88,500/-ರೂಗಳನ್ನು ಪಾವತಿಸಿದ ನಂತರ, ಶುದ್ಧಕ್ರಯಪತ್ರವನ್ನು ಮೆ||ಬಿನ್ನಿಮಿಲ್ ನಿಯಮಿತರವರು
ಮೆ||ಬಿನ್ನಿಮಿಲ್ ನಿಯಮಿತರವರ ಪರವಾಗಿ ನೀಡಲು ಹಾಗೂ

ಇ) ಯೋಜಿತ ಸಮೂಹ ವಸತಿ ಯೋಜನೆಗೆ ಸಂಬಂಧಿಸಿದಂತೆ ಬಡಾವಣೆ ನಕ್ಷೆಯನ್ನು ನಿಯಮಾನುಸಾರ ನಿಗದಿತ ಮೌಲ್ಯವನ್ನು ಪ್ರಾಧಿಕಾರಕ್ಕೆ ಪಾವತಿಸಿ ಅನುಮತಿಯನ್ನು ಪಡೆಯುವಂತೆ ಮೆ|| ಬಿನ್ನಿ ಮಿಲ್ ನಿಯಮಿತರವರಿಗೆ ಸೂಕ್ತ ನಿರ್ದೇಶನವನ್ನು ನೀಡಲು ತೀರ್ಮಾನಿಸಲಾಗಿರುತ್ತದೆ.

8) ದಿನಾಂಕ;07-10-1998 ರಂದು ಮೆ|| ಬಿನ್ನಿಮಿಲ್ ನಿವಾಸಿಗಳ ಸೇವಾ ಸಂಘದ ಸದಸ್ಯರುಗಳು ಪ್ರಾಧಿಕಾರದ ಮಾನ್ಯ ಆಯುಕ್ತರವರಿಗೆ ಮನವಿ ಪತ್ರವನ್ನು ಸಲ್ಲಿಸಿ, ತಾವುಗಳೆಲ್ಲರೂ ಬಿನ್ನಿಮಿಲ್ ಸಂಸ್ಥೆಯಲ್ಲಿ ಸುಮಾರು 40-45 ವರ್ಷಗಳ ಕಾಲ ಸೇವೆಯನ್ನು ಸಲ್ಲಿಸಿದ್ದು, ಈ ಅವಧಿಯಲ್ಲಿ ಸಂಸ್ಥೆಯವರು ತಮಗೆ ಬಾಡಿಗೆ ಆಧಾರದ ಮೇಲೆ ವಸತಿಗಳನ್ನು ನೀಡಿದ್ದು, ನಿವೃತ್ತರಾದ ಮೇಲೆ ವಸತಿಗಳನ್ನು ಖಾಲಿ ಮಾಡುವಂತೆ ಒತ್ತಡ ಹೇರುತ್ತಿದ್ದು, ಇದರ ಬಗ್ಗೆ ಕರ್ನಾಟಕ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಹಾಗೂ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಾಗಿ, ಸಂಸ್ಥೆಯವರ ಪರವಾಗಿ ತೀರ್ಪು ಬಂದಿದ್ದರಿಂದ, ತಾವುಗಳೆಲ್ಲರೂ ಬೀದಿಗೆ ಬಿದ್ದಿದ್ದು, ತಮ್ಮ ಸಮಸ್ಯೆಯನ್ನು ಮನಗಂಡ ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ.ರಾಮಕೃಷ್ಣ ಹೆಗಡೆ ರವರು ಪ್ರಾಧಿಕಾರದ ಆರ್ಥಿಕ ಹಿಂದುಳಿದ ಪ್ರವರ್ಗದಡಿಯಲ್ಲಿ 20×30 ಅಡಿ ಉದ್ದಳತೆಯ ನಿವೇಶನಗಳನ್ನು ಹಂಚಿಕೆ ಮಾಡಲು ತೀರ್ಮಾನಿಸಿದ್ದು, ಅದರಂತೆ ತಾವುಗಳು ತಮ್ಮ ಸಂಘದ ಕಾರ್ಯದರ್ಶಿಯವರಾದ ಶ್ರೀ.ರಾಜಗೋಪಾಲ್ ರವರ ಮುಖಾಂತರ ಬಿ.ಡಿ.ಎ ನಲ್ಲಿ ವ್ಯವಹರಿಸಿ, 80 ಜನ ಸದಸ್ಯರಿಗೆ ನಿವೇಶನ ಹಂಚಿಕೆಗಳನ್ನು ಪಡೆದುಕೊಂಡಿದ್ದು, ಉಳಿದವರಿಗೆ ಇದುವರೆವಿಗೂ ನಿವೇಶನ ಹಂಚಿಕೆ ಮಾಡಿರುವುದಿಲ್ಲ. ಆದ್ದರಿಂದ ಉಳಿದ ನಿವೇಶನಗಳನ್ನು ಹಂಚಿಕೆ ಮಾಡಬೇಕೆಂದು ಕೋರಿರುತ್ತಾರೆ.

9). ಬಿನ್ನಿಮಿಲ್ ನಿವಾಸಿಗಳ ಸೇವಾ ಸಂಘದ ಕಾರ್ಯದರ್ಶಿಯವರಾದ ಶ್ರೀ ಎಸ್.ಪಿ.ರಾಜಗೋಪಾಲ್ ರವರು ಪ್ರಾಧಿಕಾರಕ್ಕೆ ದಿನಾಂಕ;09-02-2001 ರಂದು ಹಾಗೂ ದಿನಾಂಕ;23-10-2002 ರಂದು ಮನವಿ ಸಲ್ಲಿಸಿ, ತಮ್ಮ ಸಂಘದಿಂದ ನಿವೇಶನ ಹಂಚಿಕೆ ಪಡೆಯುವ ಸಲುವಾಗಿ 1988 ರಲ್ಲಿ 22,55,000/-ರೂಗಳನ್ನು ಪ್ರಾಧಿಕಾರಕ್ಕೆ ಸಂಘದ ವತಿಯಿಂದ ಪಾವತಿಸಿದ್ದು, ಆದರೆ ದಿನಾಂಕ;04-04-1997 ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ 102/1997 ರಲ್ಲಿ ಬಿನ್ನಿಮಿಲ್ ಲಿಮಿಟೆಡ್ ರವರ ಪರವಾಗಿ 05 ಎಕರೆ 02 ಗುಂಟೆ ಜಮೀನನ್ನು ಸಗಟು ಹಂಚಿಕೆ ಮಾಡಲು ತೀರ್ಮಾನಿಸಿರುವುದನ್ನು ವಿರೋಧಿಸಿ ಹಿಂತೆಗೆದುಕೊಳ್ಳುವ ನಿಟ್ಟಿನಲ್ಲಿ ಹಾಗೂ ತಮ್ಮ ಸಂಘದಿಂದ ಪಾವತಿಸಿರುವ ಮೊತ್ತದಲ್ಲಿ ಉಳಿಕೆ ಮೊತ್ತವನ್ನು ತಮ್ಮ ಸಂಘಕ್ಕೆ ಮರುಪಾವತಿ ಮಾಡುವಂತೆ ಕೋರಿರುತ್ತಾರೆ.

10) ದಿನಾಂಕ;04-04-1997 ರಂದು ನಡೆದ ಠರಾವು ಸಂಖ್ಯೆ 102/1997 ರ ತೀರ್ಮಾನದಂತೆ, ಮೇಲ್ಕಂಡ 5 ಎಕರೆ ಜಮೀನಿನ ಮೌಲ್ಯದ ಬಾಬ್ತು ರೂ.8,88,509/- ಗಳನ್ನು ಕೂಡಲೇ ಪಾವತಿಸಲು ಬಿನ್ನಿ ಮಿಲ್ ಸಂಸ್ಥೆಯವರಿಗೆ ದಿನಾಂಕ:12/5/1997 ರಂದು ಪತ್ರ ಹಾಗೂ ದಿನಾಂಕ:23/3/1999 ರಂದು ನೆನಪೋಲೆ ಬರೆಯಲಾಗಿದ್ದರೂ ಸದರಿ ಮೊತ್ತವನ್ನು ಪಾವತಿಸಿರುವುದಿಲ್ಲ. ಸುಮಾರು 6 ವರ್ಷಗಳ ನಂತರ ಅಂದರೆ ದಿನಾಂಕ;15-07-2003 ರಂದು ಇವಾ ಕಂಪನಿಯವರು ಪ್ರಾಧಿಕಾರಕ್ಕೆ ದಿನಾಂಕ;15-07-2003 ರಂದು ಪತ್ರವನ್ನು ಬರೆದು, ಬಾಕಿ ಮೊತ್ತ 8,88,509/-ರೂಗಳ ಡಿ.ಡಿ ಯನ್ನು ಸಲ್ಲಿಸುತ್ತಿರುವುದಾಗಿ ತಿಳಿಸಿದ್ದು, ಈ ರೀತಿ ಹಣ ಸಂದಾಯ ಮಾಡಲು ಸುಮಾರು 6 ವರ್ಷಗಳಿಗೂ ಅಧಿಕ ವಿಳಂಬ ಮಾಡಿದ್ದರಿಂದ, ಡಿ.ಡಿಯನ್ನು ಅಂಗೀಕರಿಸಲು ಅವಕಾಶವಿಲ್ಲದ ಕಾರಣ ಡಿ.ಡಿಯನ್ನು ವಾಪಸ್ಸು ಹಿಂತಿರುಗಿಸಲು ಹಾಗೂ ಸಗಟು ಹಂಚಿಕೆಯನ್ನು ಏಕೆ ರದ್ದುಪಡಿಸಬಾರದೆಂದು ದಿನಾಂಕ;19-03-2004 ರಂದು ಕಾರಣಾಪೇಕ್ಷಿತ ಪತ್ರವನ್ನು

ನೀಡಿದ್ದು, ಈ ಪತ್ರಕ್ಕೆ ಸಂಘದವರು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿದ್ದು, ಸಂಘದವರು ಪಾವತಿ ಮಾಡಿರುವ ಮೊತ್ತವನ್ನು ವಾಪಸ್ಸು ಹಿಂತಿರುಗಿಸಿ, ಮನವಿಯನ್ನು ತಿರಸ್ಕರಿಸಲಾಗಿರುತ್ತದೆಂದು ಸಂಘದವರಿಗೆ ಹಿಂಬರಹದ ಮೂಲಕ ತಿಳಿಸಲಾಗಿರುತ್ತದೆ. ಈ ವಿಷಯವನ್ನು ದಿನಾಂಕ:30-10-2004 ರಲ್ಲಿ ನಡೆದ ಸಭೆಯಲ್ಲಿ ವಿಷಯ ಸಂಖ್ಯೆ 225/2004 ರಲ್ಲಿ ಚರ್ಚಿಸಿ, ಮೆ|| ಬಿನ್ನಿಮಿಲ್ಸ್ ಪರವಾಗಿ ಸಗಟು ಹಂಚಿಕೆ ಮಾಡಿದ್ದ ಜ್ಞಾನಭಾರತಿ ಮಳಗೇರಹಳ್ಳಿ ಗ್ರಾಮದ ಸರ್ವೆ ನಂಬರ್ 113, 18/2 & 18/3 ರಲ್ಲಿನ 5 ಎಕರೆ 2 ಗುಂಟೆ ಜಮೀನಿಗೆ ಬಾಕಿ ಹಣವನ್ನು ನಿಗಧಿತ ಅವಧಿಯಲ್ಲಿ ಪಾವತಿಸಲು ವಿಫಲರಾಗಿರುವ ಕಾರಣ, ಸಂಘದವರ ಮನವಿಯನ್ನು ತಿರಸ್ಕರಿಸಿ, ಸಗಟು ಹಂಚಿಕೆಯನ್ನು ರದ್ದುಪಡಿಸಲು ತೀರ್ಮಾನಿಸಿದ್ದು, ಠರಾವಿನ ತೀರ್ಮಾನದಂತೆ ದಿನಾಂಕ:21-02-2005 ರಂದು ಆದೇಶ ಹೊರಡಿಸಲಾಗಿರುತ್ತದೆ.

11) ದಿನಾಂಕ:21-07-2006 ರಂದು ಈಟಿಪಿ ಕರ್ನಾಟಕ ಎಸ್ಟೇಟ್ಸ್ ಲಿಮಿಟೆಡ್ ರವರು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಿ, ಘನ ಮದ್ರಾಸ್ ಉಚ್ಚ ನ್ಯಾಯಾಲಯದ ನಿರ್ದೇಶನದನ್ವಯ ಬಿ.ಐ.ಎಫ್.ಆರ್ ಆದೇಶದ ಅನುಸಾರ ದಿನಾಂಕ:22-11-2003 ರಂದು ಮೆ|| ಬಿನ್ನಿ ಸಂಸ್ಥೆಯನ್ನು ಮೆ|| ಬಿನ್ನಿ ಲಿಮಿಟೆಡ್ ಮತ್ತು ಬಿನ್ನಿ ಕರ್ನಾಟಕ ಲಿಮಿಟೆಡ್ ಎಂದು ಎರಡು ಕಂಪನಿಯನ್ನಾಗಿ ವಿಭಾಗಿಸಿದ ಮಾಡಲಾಗಿದ್ದು, ಬಿನ್ನಿಪೇಟೆ ಜಮೀನು ಬಿನ್ನಿ ಕರ್ನಾಟಕ ಸಂಸ್ಥೆಗೆ ವರ್ಗಾವಣೆಯಾಗಿದ್ದು, ತರುವಾಯ ಬಿನ್ನಿ ಕರ್ನಾಟಕ ಲಿಮಿಟೆಡ್ ಸಂಸ್ಥೆಯು ಈಟಿಪಿ ಕರ್ನಾಟಕ ಎಸ್ಟೇಟ್ಸ್ ಎಂದು ನಾಮಕರಣಗೊಂಡಿದ್ದು, ಈ ಸಂಸ್ಥೆಯು ಮುಖಾಂತರ 8,88,509/- ರೂಗಳನ್ನು ಬಿ.ಡಿ.ಎ ಗೆ ಸಲ್ಲಿಸಿದ್ದು, ಸದರಿ ಡಿಡಿಯನ್ನು ಬಿ.ಡಿ.ಎ ನವರು ಹಿಂತಿರುಗಿಸಿರುತ್ತಾರೆ. ಇದಕ್ಕೆ ತಮ್ಮ ಸಂಸ್ಥೆಯಿಂದ ಸಮಜಾಯಿಷಿಯನ್ನು ಸಲ್ಲಿಸಿರುವುದರಿಂದ, ಬಿನ್ನಿ ಸಂಸ್ಥೆಯ ಉದ್ಯೋಗಿಗಳಿಗೆ ಬಿನ್ನಿ ಸಂಸ್ಥೆಯ ಒಪ್ಪಂದದಂತೆ 05 ಎಕರೆ 02 ಗುಂಟೆ ಜಮೀನನ್ನು ಬಿಡುಗಡೆ ಮಾಡಲು ಬಿ.ಡಿ.ಎಗೆ ನಿರ್ದೇಶನವನ್ನು ನೀಡಬೇಕೆಂದು ಕೋರಿದ್ದು, ಈ ಪತ್ರಕ್ಕೆ ಸಂಬಂಧಿಸಿದಂತೆ ದಿನಾಂಕ:26-03-2007 ರಂದು ಪ್ರಾಧಿಕಾರದ ಮಾನ್ಯ ಆಯುಕ್ತರವರು ಸರ್ಕಾರಕ್ಕೆ ಪತ್ರವನ್ನು ಬರೆದು ಹಿಂದೆ ಹಂಚಿಕೆ ಮಾಡಲಾದ ಜಮೀನಿನಲ್ಲಿ ಪ್ರಾಧಿಕಾರದಿಂದ ಬಡಾವಣೆ ರಚಿಸಿ, ಅರ್ಹ ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಮಾಡಲಾಗಿದ್ದು, ದೀರ್ಘಾವಧಿ ವಿಳಂಬದ ನಂತರ ಈಟಿಪಿ ಕರ್ನಾಟಕ ಎಸ್ಟೇಟ್ಸ್ ಸಂಸ್ಥೆಯವರ ಮನವಿಯನ್ನು ಈ ಹಂತದಲ್ಲಿ ಪರಿಗಣಿಸಲು ಪ್ರಾಧಿಕಾರದ ಕಷ್ಟಸಾಧ್ಯವಾಗುತ್ತದೆಂದು ತಿಳಿಸಿರುತ್ತಾರೆ.

12) ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರು ಪ್ರಾಧಿಕಾರಕ್ಕೆ ದಿನಾಂಕ:29-02-2012, 04-12-2012, 25-03-2013, 03-07-2013, 11-07-2013, 13-01-2014, 09-04-2015 & 29-07-2015 ಮನವಿ ಪತ್ರಗಳನ್ನು ಸಲ್ಲಿಸಿ, ತಮ್ಮ ಸಂಘಕ್ಕೆ ಸಂಬಂಧಿಸಿದಂತೆ ಪ್ರಾಧಿಕಾರದಲ್ಲಿ ವ್ಯವಹರಿಸಿರುವುದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಗೂ ಸಂಘದ ವ್ಯವಹಾರಕ್ಕೆ ಸಂಬಂಧಿಸಿದ ಛಾಯಾಚಿತ್ರಗಳನ್ನು ಹಾಗೂ ಇತರೆ ದಾಖಲಾತಿಗಳನ್ನು ಸಲ್ಲಿಸಿ, ತಮ್ಮ ಸಂಘದ ಸದಸ್ಯರಿಗೆ ಬಾಕಿ 670 ನಿವೇಶನಗಳನ್ನು ಹಂಚಿಕೆ ಮಾಡಿಕೊಡಬೇಕೆಂದು ಕೋರಿದ್ದು, ಈ ಮನವಿಗೆ ಸಂಬಂಧಿಸಿದಂತೆ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಒಟ್ಟು 4 ಸಂಘಗಳು ಪ್ರಾಧಿಕಾರದಲ್ಲಿ ವ್ಯವಹರಿಸುವಾಗ ಈ ಬಗ್ಗೆ ಹಿಂದೆ ಈ ವಿಭಾಗದಲ್ಲಿ ವಿಚಾರಣೆ ಮಾಡಲಾಗಿದ್ದು, ವ್ಯವಹರಿಸುತ್ತಿರುವ ವಿಚಾರ ತಿಳಿದು, "1) ಮೆ|| ಬಿನ್ನಿಮಿಲ್ ಲಿಮಿಟೆಡ್ ಸಂಸ್ಥೆಯ ಸಂಘವಲ್ಲದೇ, ವಿಚಾರಣೆ ಸಂದರ್ಭದಲ್ಲಿ, ಅಸ್ತಿತ್ವದಲ್ಲಿ ಇರುವುದಿಲ್ಲವೆಂದು, 2) ಬಿನ್ನಿಮಿಲ್ ನೌಕರರ ಸಂಘವು ಸಂಸ್ಥೆಯಾಗಿದ್ದು, ಈ ಸಂಘವು ತನ್ನ ಹೆಸರು ಮತ್ತು ನೋಂದಣಿಯನ್ನು ಬದಲಾಯಿಸಿ "ದಿ ಬಿನ್ನಿ ಮುಚ್ಚಲಾಗಿದ್ದು, ಕೋ-ಆಪರೇಟಿವ್ ಸೊಸೈಟಿ" ಎಂದು ಹೊಸದಾಗಿ ನೋಂದಾಯಿಸಿ ಹೌಸ್ ಬಿಲ್ಡಿಂಗ್

ಕೊಂಡಿರುತ್ತದೆಂದು, 3) ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ನೋಂದಣಿ ಸಂಖ್ಯೆ 582/1979-80 ದಿನಾಂಕ:01-03-1980 ರಲ್ಲಿ ನೋಂದಣಿಯಾಗಿದ್ದು, ಅಂದಿನಿಂದ ಇಂದಿನವರೆಗೂ ಇದೇ ಸಂಘವು ಅಸ್ತಿತ್ವದಲ್ಲಿರುತ್ತದೆಂದು ಹಾಗೂ 4) ಇಟಾ ಎಂಬ ಕಂಪನಿಯು ಬಿನ್ನಿಮಿಲ್ ಲಿಮಿಟೆಡ್ ಆಸ್ತಿಯನ್ನು ಖರೀದಿಸಿ, ಇಟಾ ಕರ್ನಾಟಕ ಎಸ್ಟೇಟ್ ನಿಯಮಿತ ಎಂದು ಹೆಸರಿಟ್ಟುಕೊಂಡಿದ್ದು, ಇದು ಸಂಘವಾಗಿರದೇ ಸಂಸ್ಥೆಯಾಗಿರುತ್ತದೆಂದು" ವಿಚಾರಣಾ ವರದಿಯಲ್ಲಿ ಸ್ಪಷ್ಟಪಡಿಸಿ, ಈ ವಿಚಾರಣಾ ವರದಿಯ ಬಗ್ಗೆ ಕಾನೂನು ಅಭಿಪ್ರಾಯವನ್ನು ಪಡೆದುಕೊಳ್ಳುವಂತೆ ಸೂಚಿಸಿದ್ದರ ಮೇರೆಗೆ, ವಿಚಾರಣಾ ವರದಿಯನ್ನು ಪರಿಶೀಲಿಸಿದ ಕಾನೂನು ಅಧಿಕಾರಿಗಳು, ಈ ಕೆಳಕಂಡಂತೆ ಅಭಿಪ್ರಾಯನ್ನು ನೀಡಿರುತ್ತಾರೆ.

a. 1988 ರ ಮೂಲ ಪತ್ರ ವ್ಯವಹಾರಗಳು ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದ ಅಸ್ತಿತ್ವ ಮತ್ತು ಸಂಘದವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿದ್ದು ದೃಢಪಡಿಸುತ್ತದೆ.

b. ಪ್ರಾಧಿಕಾರದಲ್ಲಿ ಬಾಕಿ ಉಳಿದಿರುವ ಹಣವಾದ 1,6,04,900/-ರೂಗಳು ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ಸೇರಿದ್ದು ಎಂದು ಕಂಡುಬರುತ್ತದೆ.

c. ಉಚ್ಛ ನ್ಯಾಯಾಲಯದ ಆದೇಶದನ್ವಯ ಸಂಘದ ಸದಸ್ಯರಿಗೆ ಈಡಬ್ಲ್ಯೂಎಸ್ ಸೈಟುಗಳನ್ನು ನೀಡಬೇಕಾಗಿದೆ.

d. ಬಿನ್ನಿಮಿಲ್ ಲಿಮಿಟೆಡ್ ಇದು ಸಂಘವಲ್ಲದೇ ಸಂಸ್ಥೆಯಾಗಿದ್ದು, ಅಸ್ತಿತ್ವದಲ್ಲಿ ಇರುವುದಿಲ್ಲ.

e. ಇಟಾ ಎಂಬ ವಿದೇಶಿ ಕಂಪನಿಯು ಬಿನ್ನಿಮಿಲ್ ಲಿಮಿಟೆಡ್ ಆಸ್ತಿಯನ್ನು ಖರೀದಿಸಿ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿದ್ದು, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೂ ಇವರಿಗೂ ಯಾವುದೇ ಸಂಬಂಧವಿರುವುದಿಲ್ಲ.

f. ಬಿನ್ನಿಮಿಲ್ ಎಂಪ್ಲಾಯೀಸ್ ಅಸೋಸಿಯೇಷನ್ ಇದು ಅಸ್ತಿತ್ವದಲ್ಲಿ ಇರದೇ ಇದ್ದು, ಇದರ ಪದಾಧಿಕಾರಿಗಳು ಬೇರೆ ಸಂಘವನ್ನು ರಚಿಸಿದ್ದು ಕಂಡುಬರುತ್ತದೆ ಮತ್ತು ಇವರಿಗೂ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೂ ಯಾವುದೇ ಸಂಬಂಧಗಳು ಇಲ್ಲ ಮತ್ತು ಬಿನ್ನಿಮಿಲ್ ಎಂಪ್ಲಾಯೀಸ್ ಅಸೋಸಿಯೇಷನ್ ನಡೆಸಿದ ವ್ಯವಹಾರಕ್ಕೆ ಮತ್ತು ಅವ್ಯವಹಾರಕ್ಕೂ ತಾವೆ ಹೊಣೆಗಾರರಾಗುತ್ತಾರೆ ಹಾಗೂ ಪ್ರಾಧಿಕಾರ ಅಥವಾ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ಸಂಬಂಧಿಸಿದ್ದಾಗಿರುವುದಿಲ್ಲ.

ಮೇಲ್ಕಂಡ ಅಭಿಪ್ರಾಯವನ್ನು ತಿಳಿಸುತ್ತಾ, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ಹಿಂದಿನಿಂದ ಇಲ್ಲಿಯವರೆಗೂ ಅಸ್ತಿತ್ವದಲ್ಲಿರುವುದರಿಂದ ಹಾಗೂ ರಾಜ್ಯ ಸರ್ಕಾರ ಮತ್ತು ಪ್ರಾಧಿಕಾರದ ಸಭೆಗಳಲ್ಲಿ ಈ ಸಂಘಕ್ಕೆ ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಂದ ಬಾಕಿ ಮೊತ್ತವನ್ನು ಪಾವತಿಸಿಕೊಂಡು, ಹಂಚಿಕೆ ಮಾಡಬಹುದೆಂದು ಅಭಿಪ್ರಾಯವನ್ನು ನೀಡಿರುತ್ತಾರೆ.

13) ಮೇಲ್ಕಂಡ 4 ಸಂಘಗಳ ಪೈಕಿ, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ನೈಜ ಸಂಘವೆಂದು ಹಿಂದಿನ ವಿಚಾರಣೆಯಿಂದ ಹಾಗೂ ಕಾನೂನು ಅಧಿಕಾರಿಗಳು ನೀಡಿರುವ ಅಭಿಪ್ರಾಯದಿಂದ ಖಚಿತಪಟ್ಟ ನಂತರ, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿ, ಬಾಕಿ ಇರುವ ನಿವೇಶನಗಳನ್ನು ಹಂಚಿಕೆ ಮಾಡುವಂತೆ ಕೋರಿರುತ್ತಾರೆ. ಈ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ತೀರ್ಮಾನವನ್ನು ಕೈಗೊಳ್ಳಲು ಹಿಂದಿನ ಅಧಿಕಾರಿಗಳು ಕ್ರಮಕೈಗೊಳ್ಳುತ್ತಿರುವಾಗ, ಸಂಘದವರು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ನೀಡಿರುವ ಮನವಿ ಪತ್ರದ ಆಧಾರದ ಮೇಲೆ,

ನಗರಾಭಿವೃದ್ಧಿ ಸಚಿವರ ಆಪ್ತ ಕಾರ್ಯದರ್ಶಿಯವರು ಪ್ರಾಧಿಕಾರಕ್ಕೆ ಪತ್ರವನ್ನು ಬರೆದು, ಸಂಘದವರ ಮನವಿಯ ಬಗ್ಗೆ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸುವಂತೆ ಸೂಚಿಸಿದ್ದು, ಅದರಂತೆ ವಿಷಯವನ್ನು ಸಭೆಗೆ ಮಂಡಿಸಲು ನಿಯಮಾನುಸಾರ ಕಡತವನ್ನು ಮಾನ್ಯ ಅಧ್ಯಕ್ಷರವರಿಗೆ ಕಳುಹಿಸಿದಾಗ, ಮಾನ್ಯ ಅಧ್ಯಕ್ಷರವರು ಕಂಡಿಕೆ 242 ರಲ್ಲಿ "ಜಮೀನು ಲಭ್ಯವಿರುವ ಜಾಗದ ವಿವರದೊಂದಿಗೆ ಮಂಡಿಸಿ" ಎಂದು ಸೂಚಿಸಿದ್ದು, ಅದರಂತೆ ಸಂಘದವರು ದಿನಾಂಕ;30-08-2017 ರಂದು ಮಾನ್ಯ ಅಧ್ಯಕ್ಷರವರಿಗೆ ಮನವಿ ಪತ್ರವನ್ನು ನೀಡಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ನಂಬರ್ 53/1ಎ ರಲ್ಲಿ 01 ಎಕರೆ ಜಮೀನನ್ನು ಹಾಗೂ ಸರ್ವೆ ನಂಬರ್ 53/1ಬಿ 01 ಎಕರೆ 35 ಜಮೀನನ್ನು ಒಟ್ಟು 02 ಎಕರೆ 35 ಗುಂಟೆ ಜಮೀನನ್ನು ಸೇರಿದಂತೆ ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ ಸಂಪಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 31/3 ರಲ್ಲಿನ 1 ಎಕರೆ 14 ಗುಂಟೆ ಜಮೀನನ್ನು ಹಾಗೂ ಇದೇ ಸಂಪಿಗೆಹಳ್ಳಿ ಗ್ರಾಮದ ಸರ್ವೆ ನಂಬರ್ 39/1 ರಲ್ಲಿ ಜಮೀನನ್ನು ಸಗಟು ಹಂಚಿಕೆ ಮಾಡಿಕೊಡುವಂತೆ ಹಾಗೂ ಈ ಎಲ್ಲಾ ಜಮೀನುಗಳು ಉಪ ಕಾರ್ಯದರ್ಶಿ-4 ರ ವಿಭಾಗಕ್ಕೆ ಸಂಬಂಧಿಸಿರುವುದರಿಂದ, ಕಡತವನ್ನು ಉಪ ಕಾರ್ಯದರ್ಶಿ-4 ರ ವಿಭಾಗಕ್ಕೆ ಕಳುಹಿಸಿಕೊಡಬೇಕೆಂದು ಕೋರಿದ್ದು, ಈ ಮನವಿ ಪತ್ರಕ್ಕೆ ಮಾನ್ಯ ಅಧ್ಯಕ್ಷರವರು ಇಂಗ್ಲೀಷ್ ಭಾಷೆಯಲ್ಲಿ "PI put up for Board meeting" ಎಂದು ಷರಾ ಬರೆದು ಆಯುಕ್ತರವರಿಗೆ ಸೂಚಿಸಿರುತ್ತಾರೆ. ನಂತರ ಉಪ ಕಾರ್ಯದರ್ಶಿ-4 ರವರು ಸಭೆಗೆ ವಿಷಯವನ್ನು ತಯಾರು ಮಾಡಿ, ಕಾರ್ಯದರ್ಶಿರವರ ಮುಖಾಂತರ, ಆಯುಕ್ತರವರಿಗೆ, ಆಯುಕ್ತರವರಿಂದ ಮಾನ್ಯ ಅಧ್ಯಕ್ಷರಿಗೆ ಸಭೆಯ ಟಿಪ್ಪಣಿಗೆ ಸಹಿ ಮಾಡಿಸಿ, ನಂತರ ಈ ವಿಷಯವನ್ನು ದಿನಾಂಕ;09-11-2017 ರಂದು ನಡೆದ ಸಭೆಯಲ್ಲಿ ವಿಷಯ ಸಂಖ್ಯೆ:173/2017 ರಲ್ಲಿ ಮಂಡಿಸಿದ್ದು, ಈ ಸಭೆಯಲ್ಲಿ ದಿನಾಂಕ:30-10-2004 ರಂದು ವಿಷಯ ಸಂಖ್ಯೆ 225/2004 ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಹಿಂತೆಗೆದುಕೊಂಡು, ಲಭ್ಯತೆಯ ಆಧಾರದ ಮೇಲೆ 05 ಎಕರೆ 02 ಗುಂಟೆ ವಿಸ್ತೀರ್ಣದ ಜಮೀನನ್ನು/ನಿವೇಶನಗಳನ್ನು ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಆರ್ಥಿಕ ವಿಭಾಗದವರು ನಿಗದಿಪಡಿಸುವ ದರವನ್ನು ವಿಧಿಸಿ ಸಗಟಾಗಿ ನಿಯಮಾನುಸಾರ ಹಂಚಿಕೆ ಮಾಡಲು ನಿರ್ಣಯಿಸಲಾಗಿರುತ್ತದೆ.

14) ದಿನಾಂಕ:09-11-2017 ರಂದು ನಡೆದ ಠರಾವು ಸಂಖ್ಯೆ 173/2017 ರಲ್ಲಿ ತೆಗೆದುಕೊಂಡ ತೀರ್ಮಾನದಂತೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ನಂಬರ್ 53/1ಎ ರಲ್ಲಿ 25.85 ಗುಂಟೆ ಜಮೀನನ್ನು ಹಾಗೂ ಸರ್ವೆ ನಂಬರ್ 53/1ಬಿ 01 ಎಕರೆ 34.22 ಗುಂಟೆ ಜಮೀನನ್ನು ಹಾಗೂ ಉಳಿದ ಜಾಗಕ್ಕೆ ವಿವಿಧ ಬಡಾವಣೆಗಳಲ್ಲಿ ನಿವೇಶನಗಳನ್ನು ಸಗಟು ಹಂಚಿಕೆ ಮಾಡಲು ಉಪ ಕಾರ್ಯದರ್ಶಿ-4 ರ ವಿಭಾಗದವರು ಕ್ರಮಕೈಗೊಂಡಿದ್ದು, ಇದಕ್ಕೆ ತಗಲುವ ವೆಚ್ಚದ ಬಗ್ಗೆ ಆರ್ಥಿಕ ವಿಭಾಗದವರಿಂದ ಪರಿಶೀಲಿಸಿಕೊಂಡಿದ್ದು, ಆರ್ಥಿಕ ವಿಭಾಗದವರು ನಿಗದಿಪಡಿಸಿದ್ದ ಮೊತ್ತವನ್ನು ಉಪ ಕಾರ್ಯದರ್ಶಿ-4 ವಿಭಾಗದವರು ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಂದ ಭರಿಸಿಕೊಂಡಿರುವುದು ಕಂಡುಬಂದಿದ್ದು, ಹಂಚಿಕೆ ಮಾಡಲು ಪ್ರಸ್ತಾಪಿಸಿರುವ ಜಮೀನನ್ನು ಹಾಗೂ ನಿವೇಶನಗಳನ್ನು ಹಂಚಿಕೆ ಮಾಡಿ, ಕ್ರಯಪತ್ರ ನೋಂದಾಯಿಸಿರುವ ಹಾಗೂ ಸ್ವಾಧೀನ ಪತ್ರವನ್ನು ನೀಡಿರುವ ಬಗ್ಗೆ ಕಡತದಲ್ಲಿ ಯಾವುದೇ ಮಾಹಿತಿ/ದಾಖಲಾತಿಗಳು ಇರುವುದು ಕಂಡುಬಂದಿರುವುದಿಲ್ಲ.

ಮೇಲ್ಕಂಡ ಎಲ್ಲಾ ಅಂಶಗಳು ಪ್ರಸ್ತುತ ವಿಚಾರಣೆ ಸಂದರ್ಭದಲ್ಲಿ ಕಂಡುಬಂದಿದ್ದು, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘವು ಸಂಬಂಧಪಟ್ಟ ನಿಬಂಧಕರ ಕಛೇರಿಯಲ್ಲಿ 1979-80ನೇ ಸಾಲಿನಲ್ಲಿ ನೋಂದಣಿ ಸಂಖ್ಯೆ 582/1979-80 ರಲ್ಲಿ ನೋಂದಣಿ ಮಾಡಿಸಿಕೊಂಡು, ಪ್ರಸ್ತುತ ಅಸ್ತಿತ್ವದಲ್ಲಿರುವುದು ಹಿಂದಿನ ವಿಚಾರಣೆಯಿಂದ ಕಂಡುಬಂದಿದ್ದು, ಸದರಿ ಸಂಘದವರು ರಾಜ್ಯ ಸರ್ಕಾರದ ಆದೇಶದಂತೆ ಹಾಗೂ ಪ್ರಾಧಿಕಾರದ ಸಭೆಯ ತೀರ್ಮಾನದಂತೆ, 750 ನಿವೇಶನಗಳಿಗೆ ಮುಂಗಡ ಹಣವಾಗಿ 22,50,000/- ರೂಗಳನ್ನು ದಿನಾಂಕ:09-12-1988 ರಂದು ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಈ 750 ನಿವೇಶನಗಳ ಪೈಕಿ, 80 ನಿವೇಶನಗಳನ್ನು ಮಾತ್ರ ಸಂಘದ ಪರವಾಗಿ ನೀಡಿದ್ದು, ಉಳಿದ ನಿವೇಶನಗಳನ್ನು ಈ ಹಿಂದೆ ಅನುಮೋದಿಸಿದ ಸರ್ಕಾರದ ಆದೇಶದ ಪತ್ರ ಸಂಖ್ಯೆ:HUD/101/MNX/88 ದಿನಾಂಕ:18/6/1988 ಮತ್ತು ಸರ್ಕಾರದ ಆದೇಶದ ಪತ್ರ ಸಂಖ್ಯೆ HUD/118/MNX/94 ದಿನಾಂಕ:16/03/1996 ಹಾಗೂ ಪ್ರಾಧಿಕಾರದ ಇತ್ತೀಚಿನ ಠರಾವು ಸಂಖ್ಯೆ 173/2017 ರ ತೀರ್ಮಾನದಂತೆ, ಮೇಲ್ಕಂಡ ಸಂಘದವರಿಗೆ ನೀಡಿರುವುದು ಕಂಡುಬಂದಿರುತ್ತದೆ.

ಸರ್ಕಾರದ ಆದೇಶದ ಪತ್ರ ಸಂಖ್ಯೆ HUD/101/MNX/88 ದಿನಾಂಕ: 18/6/1988 ರ ಆದೇಶಾನುಸಾರ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರು 22,50,000/-ರೂಗಳನ್ನು ಈಗಾಗಲೇ ಪಾವತಿಸಿದ್ದು, 80 ಜನ ಸದಸ್ಯರಿಗೆ ನೀಡಿರುವ ನಿವೇಶನಗಳ ಮೌಲ್ಯ 4,84,000/-ರೂಗಳು ಮತ್ತು ಸಂಘದವರ ಕೋರಿಕೆಯ ಮೇರೆಗೆ ವಾಪಸ್ಸು ಮಾಡಿರುವ ಮೊತ್ತ 2,61,100/-ರೂಗಳನ್ನು ಹೊರತುಪಡಿಸಿ, ಉಳಿದ ಮೊತ್ತ 15,04,900/-ರೂಗಳು ಪ್ರಾಧಿಕಾರದ ವಶದಲ್ಲಿದ್ದು, ಸರ್ಕಾರದ ಆದೇಶದ ಪತ್ರ ಸಂಖ್ಯೆ HUD/118/MNX/94 ದಿನಾಂಕ 16/03/1996 ರ ಆದೇಶಾನುಸಾರ 05 ಎಕರೆ 02 ಗುಂಟೆ ಜಮೀನನ್ನು ಸಗಟು ಹಂಚಿಕೆ ಮಾಡುವ ನಿರ್ದೇಶನದಂತೆ, ಜಮೀನು ಹಾಗೂ ನಿವೇಶನಗಳನ್ನು ಸಂಘದವರಿಗೆ ನೀಡಲು ಕಂಡಿಕೆ 27 ರಲ್ಲಿ ಆರ್ಥಿಕ ವಿಭಾಗದವರು ಲೆಕ್ಕಾಚಾರ ಮಾಡಿರುವಂತೆ ಹಾಗೂ ಠರಾವು ಸಂಖ್ಯೆ 173/2017 ರ ತೀರ್ಮಾನದಂತೆ ಕ್ರಮವಹಿಸಿರುವುದು ಕಂಡುಬಂದಿರುತ್ತದೆ.

ಆದರೆ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ನೀಡಿರುವ ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ನಂಬರ್ 53/1ಎ ರಲ್ಲಿ 25.85 ಗುಂಟೆ ಜಮೀನನ್ನು ಮತ್ತು ಸರ್ವೆ ನಂಬರ್ 53/1ಬಿ 01 ಎಕರೆ 34.22 ಜಮೀನನ್ನು, ಈ ಹಿಂದೆ ಬಿ.ಡಿ.ಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್(ರಿ) ಸಂಘದವರಿಗೆ ಪ್ರಾಧಿಕಾರದಿಂದಲೇ ದಿನಾಂಕ:31-05-2013 ರಂದು ಹಂಚಿಕೆ ಮಾಡಿ, ಜಮೀನಿಗೆ ಸಂಬಂಧಿಸಿದಂತೆ ಸಂಘದವರಿಂದ ಮೊತ್ತವನ್ನು ಪಾವತಿಸಿಕೊಂಡು, ದಿನಾಂಕ: 04-06-2013 ರಂದು ಶುದ್ಧಕ್ರಯಪತ್ರವನ್ನು ನೋಂದಾಯಿಸಿ, ಸ್ವಾಧೀನ ಪತ್ರವನ್ನು ನೀಡಿದ್ದು, ಇದರ ವಿರುದ್ಧ ಪ್ರಾಧಿಕಾರದ ನಿವೃತ್ತ ನೌಕರರ ಸಂಘವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆ ತಂದ ಕಾರಣ ಹಾಗೂ ವಿದ್ಯುನ್ಮಾನ ಮಾಧ್ಯಮದಿಂದ ಹಾಗೂ ದಿನಪತ್ರಿಕೆಗಳಿಂದ ಸಂಘದ ವಿರುದ್ಧ ಆರೋಪಗಳನ್ನು ಮಾಡುತ್ತಿರುತ್ತಾರೆಂಬ ಕಾರಣದಿಂದ, ಸ್ವತಃ ಬಿ.ಡಿ.ಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್(ರಿ) ಸಂಘದ ಅಧ್ಯಕ್ಷರವರೇ ಖುದ್ದಾಗಿ ಪ್ರಾಧಿಕಾರಕ್ಕೆ ಮನವಿ ಪತ್ರವನ್ನು ನೀಡಿ, ನೋಂದಾಯಿಸಿರುವ ಶುದ್ಧಕ್ರಯಪತ್ರವನ್ನು ದಿನಾಂಕ:11-06-2013 ರಂದು ನೋಂದಾಯಿತ ರದ್ದಿಯಾತಿ ಪತ್ರದ ಮೂಲಕ ರದ್ದುಪಡಿಸಲಾಗಿರುತ್ತದೆ. ಈ ರೀತಿ ರದ್ದುಪಡಿಸಿಕೊಂಡಿರುವ ಜಾಗವು ಪ್ರಾಧಿಕಾರಕ್ಕೆ ಸೇರಿದ ಸ್ವತ್ತಾಗಿದ್ದು, ಈ ಸ್ವತ್ತನ್ನು ಯಾರಿಗೂ ಹಂಚಿಕೆ ಮಾಡದ ಕಾರಣ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಹಂಚಿಕೆ ಮಾಡಿ, ಕ್ರಯಪತ್ರವನ್ನು ನೋಂದಾಯಿಸಿರುವುದು ಕಂಡುಬಂದಿರುತ್ತದೆ.

ಮುಂದುವರೆದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ನೌಕರರ ಸಂಘ(ನೋಂ)ದ ಅಧ್ಯಕ್ಷರು ತಮ್ಮ ದೂರು ಅರ್ಜಿಯಲ್ಲಿ ಆರೋಪಿಸಿರುವಂತೆ, ಸಗಟು ಹಂಚಿಕೆ ಉಪ ಕಾರ್ಯದರ್ಶಿ-1 ರ ವಿಭಾಗದಲ್ಲಿ ನಡೆದಿದ್ದರೂ ಸಹ ಇದನ್ನು ಮರೆಮಾಚಿ ಉಪ ಕಾರ್ಯದರ್ಶಿ-4 ರ ವಿಭಾಗದವರು ಮಾನ್ಯ ಮುಖ್ಯ ಚುನಾವಣಾಧಿಕಾರಿಯವರ ಆದೇಶ ಸಂಖ್ಯೆ ಸಿಇಸುಇ 14 ಚುಸಿಅ(ಆಮುಚುಅ-1)2018, ದಿನಾಂಕ;07-02-2018 ಮತ್ತು ಆಯುಕ್ತರ ಕಛೇರಿಯ ಟಿಪ್ಪಣಿ ಸಂಖ್ಯೆ ಬೆಂಅಪ್ರಾ/ಆಯು:/126/2018-19, ದಿನಾಂಕ;27-3-2018 ರ ಆದೇಶಗಳನ್ನು ಉಲ್ಲಂಘಿಸಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದಾಗಿ ತಿಳಿಸಿದ್ದರೂ ಸಹ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಮೇಲ್ಕಂಡ ವಸಂತಪುರ ಗ್ರಾಮದ ಸರ್ವೆ ನಂಬರ್ 53/1ಎ ರಲ್ಲಿ 25.85 ಗುಂಟೆ ಜಮೀನು ಹಾಗೂ ಸರ್ವೆ ನಂಬರ್ 53/1ಬಿ ರಲ್ಲಿ 01 ಎಕರೆ 34.22 ಗುಂಟೆ ಜಮೀನನ್ನು ಹಂಚಿಕೆ ಮಾಡಿ, ದಿನಾಂಕ;21-04-2018 ರಂದು ನೋಂದಣಿ ಮಾಡಿಕೊಟ್ಟಿರುತ್ತಾರೆಂದು ಆರೋಪಿಸಿರುವ ಹಿನ್ನಲೆಯಲ್ಲಿ, ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ಸಂಬಂಧಿಸಿದ ವಿಷಯವನ್ನು ಪ್ರಾಧಿಕಾರವು ದಿನಾಂಕ;09-11-2017 ರಂದು ನಡೆದಿರುವ ಸಭೆಯಲ್ಲಿ ವಿಷಯ ಸಂಖ್ಯೆ 173/2017 ರಲ್ಲಿ ಚರ್ಚಿಸಿ, ತೀರ್ಮಾನವನ್ನು ಕೈಗೊಂಡಿರುವುದು ಹಾಗೂ ಚುನಾವಣಾ ನೀತಿ ಸಂಹಿತೆ ಜಾರಿಯಾಗುವ ಮುನ್ನ ಅಂದರೆ ದಿನಾಂಕ;27-03-2018 ರ ಒಳಗೆ ಸಂಘದವರು ಹಣ ಪಾವತಿಸಲು ನೀಡಿರುವ ಹಿಂಬರಹವು ದಿನಾಂಕ;16-03-2018 ಆಗಿರುವುದರಿಂದ, ನೀತಿ ಸಂಹಿತೆ ಜಾರಿಯಾಗುವ ಮುಂಚೆ ಪ್ರಾಧಿಕಾರದ ಸಂಬಂಧಪಟ್ಟ ವಿಭಾಗದವರು ಕ್ರಮಕೈಗೊಂಡಿರುವುದು ಕಂಡುಬಂದಿರುತ್ತದೆ.

ಮುಂದುವರೆದು, ಸಂಬಂಧಪಟ್ಟ ಪ್ರಾಧಿಕಾರದ ಅಧಿಕಾರಿಗಳನ್ನು ಸಾರ್ವತ್ರಿಕ ವಿಧಾನಸಭಾ ಚುನಾವಣೆ-2018 ರ ಕರ್ತವ್ಯಕ್ಕೆ ಚುನಾವಣಾ ಆಯೋಗವು ನಿಯೋಜಿಸಿದ್ದು, ಚುನಾವಣಾ ಆಯೋಗವು ನೀಡಿರುವ ಸುತ್ತೋಲೆ ಹಾಗೂ ಇತರೆ ನಿರ್ದೇಶನಗಳಂತೆ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡ ಅಧಿಕಾರಿಗಳು ಚುನಾವಣಾ ಕರ್ತವ್ಯವನ್ನು ಚಾಚುತಪ್ಪದೇ ನಿರ್ವಹಿಸತಕ್ಕದ್ದೆಂದು ಸೂಚಿಸಿದ್ದು, ಈ ಸಂದರ್ಭದಲ್ಲಿ ನಿಯೋಜನೆಗೊಂಡ ಅಧಿಕಾರಿಗಳಿಂದ ಕಛೇರಿಯ ದೈನಂದಿನ ಕೆಲಸಕಾರ್ಯಗಳು ವಿಳಂಬವಾಗುವ ಸಂಭವವಿದ್ದುದ್ದರಿಂದ, ಈ ಬಗ್ಗೆ ಪ್ರಾಧಿಕಾರದ ಮಾನ್ಯ ಆಯುಕ್ತರವರು ಅವಶ್ಯಕವಿದ್ದಲ್ಲಿ ಮಾತ್ರ ಕಛೇರಿಯ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ತಮ್ಮ ಟಿಪ್ಪಣಿ ಸಂಖ್ಯೆ ಬೆಂಅಪ್ರಾ ಆಯು/126/2018-19, ದಿನಾಂಕ;27-03-2018 ರಲ್ಲಿ ಸೂಚಿಸಿದ್ದರ ಮೇರೆಗೆ, ಸಂಘಕ್ಕೆ ಸಂಬಂಧಿಸಿದಂತೆ ನೋಂದಾಯಿಸಿರುವ ಕ್ರಯಪತ್ರಗಳು ಕಛೇರಿಯ ದೈನಂದಿನ ಕೆಲಸ ಕಾರ್ಯಗಳನ್ವಯ ನಿರ್ವಹಿಸಿರುವಂತೆ ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಈ ಮಧ್ಯೆ ಬಿ.ಡಿ.ಎ ಎಂಪ್ಲಾಯೀಸ್ ವೆಲ್ಫೇರ್ ಅಸೋಸಿಯೇಷನ್(ರಿ) ಸಂಘದ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದರ್ಶಿಗಳು ಪ್ರಾಧಿಕಾರದ ಮಾನ್ಯ ಆಯುಕ್ತರವರಿಗೆ ಮನವಿ ಪತ್ರವನ್ನು ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ವಸಂತಪುರ ಗ್ರಾಮದ ಸರ್ವೆ ನಂಬರ್ 53/1ಎ ರಲ್ಲಿ 25.85 ಗುಂಟೆ ಜಮೀನನ್ನು ಮತ್ತು ಸರ್ವೆ ನಂಬರ್ 53/1ಬಿ 01 ಎಕರೆ 34.22 ಜಮೀನನ್ನು ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಸಗಟು ಹಂಚಿಕೆ ಮಾಡಿ, ಕ್ರಯಪತ್ರವನ್ನು ನೋಂದಾಯಿಸಿರುವುದರಿಂದ, ತಮ್ಮ ಸಂಘಕ್ಕೆ ನೀಡಬೇಕಾದಿರುವ ಉಳಿದ 02 ಎಕರೆ 25 ಗುಂಟೆ ಜಮೀನನ್ನು ಕೆಂಪೇಗೌಡ ಬಡಾವಣೆ ಅಥವಾ ನಂತರದ ಯಾವುದಾದರೂ ಬಡಾವಣೆಯಲ್ಲಿ ಜಮೀನನ್ನು ಗುರ್ತಿಸಿ ನೌಕರರ ಸಂಘಕ್ಕೆ ನೀಡುವಂತೆ ಮನವಿ

ಸಲ್ಲಿಸಿದ್ದು, ಸದರಿಯವರ ಮನವಿಯನ್ನು ಪುರಸ್ಕರಿಸಲು ಪ್ರಾಧಿಕಾರದ ನಿಯಮಾನುಸಾರ ಕ್ರಮವಹಿಸಬಹುದಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳು ಲಭ್ಯವಿದ್ದ ಕಡತದಲ್ಲಿರುವ ದಾಖಲಾತಿಗಳ ಪರಿಶೀಲನೆಯಿಂದ ಕಂಡುಬಂದಿರುತ್ತದೆಂಬ ಅಂಶವನ್ನು ಮಾನ್ಯರ ಅವಗಾಹನೆಗಾಗಿ ತರುತ್ತಾ, ಈ ವರದಿಯನ್ನು ಮುಂದಿನ ಕ್ರಮಕ್ಕಾಗಿ ಮಂಡಿಸಿದೆ.

I have been [illegible] for Land Audit, now pl identify all the BDA's land in the university.

14/5/18

ಆರಕ್ಷಕ ಅಧೀಕ್ಷಕರು
ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತ
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು - 560 020

15) Comm. BDA

14.05

16) Secy.

J.C. (L. Acq)

-ಅನುಬಂಧ- 13

No. ADGP/BMTF/PETITION-151/2018

ನಂ.ಎಡಿಜಿಪಿ/ಬಿಎಂ.ಟಿ.ಎಫ್/ಪಿಟಿಷನ್/151/2018

ಬೆಂಗಳೂರು [illegible] ಕಾರ್ಯಪಡೆ,
ಪೊಲೀಸ್ [illegible] ಬೆಂಗಳೂರು ನಗರ.

ಮಾನ್ಯ ಅಪರ ಪೊಲೀಸ್ ಮಹಾನಿರ್ದೇಶಕರು,
ಬೆಂಗಳೂರು ಮಹಾನಗರ ಕಾರ್ಯಪಡೆ ಪಡೆ,
ಬೆಂಗಳೂರು.

ಮಾನ್ಯರೇ,

ವಿಷಯ: ದೂ[illegible] ಅರ್ಜಿಯನ್ನು ಮುಕ್ತಾಯ ಮಾಡಲು ವಿಚಾರಣಾ ವರದಿ ಸಲ್ಲಿಸುತ್ತಿರುವ ಬಗ್ಗೆ

ಉಲ್ಲೇಖ: ನಂ.ಎ[illegible]/ಬಿಎಂಟಿಎಫ್/ಪಿಟಿಷನ್/151/2018, ದಿನಾಂಕ: 11-05-2018

[illegible] ವಿಷಯಕ್ಕೆ ಸಂಬಂಧಿಸಿದಂತೆ, ಬಿ.ಡಿ.ಎ ಅಧಿಕಾರಿಗಳೊಂದಿಗೆ ಶಾಮೀಲಾಗಿ [illegible]ಪೇಟೆ ನಿವಾಸಿಗಳ ಸೇವಾ [illegible] ಅಕ್ರಮವಾಗಿ ವಸಂತಪುರ ಗ್ರಾಮದ ಸರ್ವೇ ನಂ. 53/1ಬಿ ಎಲ್ಲಿ 1 ಎಕರೆ 34 ಗುಂಟೆ, 53/1ಎ [illegible] 25 ಗುಂಟೆ ಜ[illegible] ಮತ್ತು ವಿವಿಧ ಬಿ.ಡಿ.ಎ ಬಡಾವಣೆಗಳಲ್ಲಿ 111 ನಿವೇಶನಗಳನ್ನು ಅನಧಿಕೃತವಾಗಿ ಹಂಚಿಕೆ ಮಾಡಿ[illegible] ಅಕ್ರಮವಾಗಿ [illegible] ಮಾರಾಟ ಮಾಡಿ ಬಿಡಿಎ ಹಾಗೂ ಸರ್ಕಾರ[illegible] ಮಾಡಿರುವವರ [illegible] ರೀತಿ ಕ್ರಮ ಕೈಗೊಳ್ಳುವಂತೆ ಶ್ರೀ [illegible] ಚಿಕ್ಕಯ್ಯ ಹಾಗೂ ಇತರರು [illegible] ದೂರು ಅರ್ಜಿ [illegible] ಅಪರ ಪೊಲೀಸ್ ಮಹಾ ನಿರ್ದೇಶಕರ ಕಛೇರಿಯಲ್ಲಿ ಸ್ವೀಕರಿಸಿ ಉಲ್ಲೇಖದಂತೆ ದಾಖಲಾಗಿರುತ್ತದೆ.

[illegible] ದೂರು ಅರ್ಜಿ[illegible] ಕ್ರಮ ಕೈಗೊಳ್ಳುವಂತೆ ಮಾನ್ಯ ಅಪರ ಪೊಲೀಸ್ ಮಹಾ ನಿರ್ದೇಶಕರವರು ಸೂಚಿಸಿದ್ದ ಮೇ[illegible] ವಿಚಾರಣೆಯನ್ನು ಕೈಗೊಂಡಿರುತ್ತೇನೆ.

ದಿನಾಂಕ: 23-05-2018 ರಂದು [illegible] ಅಧಿಕಾರಿಗಳು, ಬನಶಂಕರಿ, ದಕ್ಷಿಣ ವಿಭಾಗ ರವರಿಗೆ ಉಲ್ಲೇಖಿಸಿದ ದೂರು ಅರ್ಜಿಯ ವಿಚಾರಣೆ ಮುಕ್ತಾಯ ಆಗುವವರೆಗೂ ದೂರು ಅರ್ಜಿಗೆ ಸಂಬಂಧಿಸಿದಂತೆ, ಸುಮಾರು 20 ನಿವೇಶನಗಳಲ್ಲಿ ಖಾತೆ ನೀಡದಂತೆ ತಡೆಹಿಡಿಯಲು ಕೋರಿ ಪೊಲೀಸ್ ನೋಟಿಸ್ ಜಾರಿ ಮಾಡಿರುತ್ತೇನೆ.

[illegible] ಜಿ. ದಯಾನಂದ [illegible] ಬನ್ನಿಪೇಟೆ ನಿವಾಸಿಗಳ ಸೇವಾ ಸಂಘ ರವರಿಗೆ ಸಂಬಂಧಪಟ್ಟ ಎಲ್ಲಾ ದಾಖಲೆ[illegible] ವಿಚಾರಣೆಗೆ ಹಾಜ[illegible] ನೋಟಿಸ್ ಜಾರಿ ಮಾಡಿರುತ್ತೇನೆ.

ದಿನಾಂಕ: 24-05-2018 ರಂದು [illegible] ಅಧಿಕಾರಿಗಳು, ವಿಜಯನಗರ, ಪಶ್ಚಿಮ ವಿಭಾಗ ರವರಿಗೆ [illegible] ದೂರು ಅರ್ಜಿಯ ವಿಚಾರಣೆ ಮುಕ್ತಾಯ ಆಗುವವರೆಗೂ ದೂರು ಅರ್ಜಿಗೆ ಸಂಬಂಧಿಸಿದಂತೆ, ಸುಮಾರು 20 ನಿವೇಶನಗಳಲ್ಲಿ ಖಾತೆ ನೀಡದಂತೆ ತಡೆಹಿಡಿಯಲು ಕೋರಿ ಪೊಲೀಸ್ ನೋಟಿಸ್ ಜಾರಿ ಮಾಡಿರುತ್ತೇನೆ.

[illegible] ಹಾಗೂ ಇದೇ ದಿನ 1) ಶ್ರೀಮತಿ ಎಂ. ಬಿ ಕಮಲ, ಮೇಲ್ವಿಚಾರಕರು (ಉಪ ಕಾರ್ಯದರ್ಶಿ-4 ಕಛೇರಿ), ಬಿ.ಡಿ.ಎ 2) ಶ್ರೀ. ಬಿ[illegible] ವೆಂಕಟರಮಣಪ್ಪ, ಪ್ರಥಮ ನಿರ್ವಾಹಕರು (ಉಪ ಕಾರ್ಯದರ್ಶಿ-4 ಕಛೇರಿ), ಬಿ.ಡಿ.ಎ ಹಾಗೂ 3) ಶ್ರೀಮತಿ. ಎಸ್.ಎ. ಮಂಗಳ, ಉಪ ಕಾರ್ಯದರ್ಶಿ-4, ಬಿ.ಡಿ.ಎ, ರವರುಗಳಿಗೆ ಬನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ವಸಂತಪುರ ಗ್ರಾಮದ ಸರ್ವೇ ನಂ. 53/1ಬಿ ಎಲ್ಲಿ 1 ಎಕರೆ 34 ಗುಂಟೆ, 53/1ಎ ರಲ್ಲಿ 25 ಗುಂಟೆ ಒಟ್ಟು 2 ಎಕರೆ 20 ಗುಂಟೆ ಜಮೀನು ಮತ್ತು ಸರ್. ಎಂ.ವಿಶ್ವೇಶ್ವರಯ್ಯ ಬಡಾವಣೆ, 6 ನೇ ಹಂತ, ಜ್ಞಾನ ಭಾರತಿ ಮತ್ತು ನಾಡಪ್ರಭು ಬಿ.ಡಿ.ಎ ಬಡಾವಣೆಗಳಲ್ಲಿ ಒಟ್ಟು 111 ನಿವೇಶನಗಳನ್ನು ಹಂಚಿಕೆ ಮಾಡಿರುವ ಮೂಲ ಕಡತಗಳೊಂದಿಗೆ ವಿಚಾರಣೆಗೆ ಹಾಜರಾಗುವಂತೆ ಪೊಲೀಸ್ ನೋಟಿಸ್ ಜಾರಿ ಮಾಡಿರುತ್ತೇನೆ.

ದಿನಾಂಕ: 25-05-2018 ರಂದು ಶ್ರೀ. ಜಿ. ದಯಾನಂದಸ್ವಾಮಿ, ಅಧ್ಯಕ್ಷರು, ಹಾಗೂ ಶ್ರೀ. ಆರ್. [illegible] ಕಾರ್ಯದರ್ಶಿ ಬನ್ನಿಪೇಟೆ ನಿವಾಸಿಗಳ ಸೇವಾ ಸಂಘ ರವರುಗಳು ವಿಚಾರಣೆಗೆ ಹಾಜರಾಗಿ[illegible] ಅವರು [illegible] ಹಾಗೂ ದಾಖಲಾತಿಗಳನ್ನು ಪಡೆದು ಕಡತದಲ್ಲಿ ಅಡಕಗೊಳಿಸಿರುತ್ತೇನೆ.

No: ADGP/BMTF/PETITION-151/2018

ದಿನಾಂಕ [illegible]-05-2018 ರಂದು, 1) ಶ್ರೀಮತಿ, ಎಸ್.ಎಂ. ಮಂಗಳ, ಉಪ ಕಾರ್ಯದರ್ಶಿ, ಬಿ.ಡಿ.ಎ, 2) ಶ್ರೀಮತಿ ಕಮಲ ಎಂ. ವಿ ಸೂಪ[illegible], ಬಿ.ಡಿ.ಎ 3) ಬಿ. ವೆಂಕಟರಮಣಪ್ಪ, ವಿಷಯ ನಿರ್ವಹಕ, ಬಿ.ಡಿ.ಎ ರವರುಗಳು ವಿಚಾರಣೆಗೆ ಹಾಜರಾಗಿ [illegible] ನೀಡಿದ ಹೇಳಿಕೆಗಳನ್ನು ಪಡೆದು ಕಡತದಲ್ಲಿ ಅಡಕಗೊಳಿಸಿರುತ್ತೇನೆ.

[illegible] ದಿನ ಅಭಿಯಂತರ, ಸದಸ್ಯರು, ಬಿ.ಡಿ.ಎ. ಬೆಂಗಳೂರು ರವರಿಗೆ ವಸಂತಪುರ ಗ್ರಾಮದ ಸರ್ವೆ ನಂ. 53/[illegible] 1 ಎಕರೆ 34 ಗುಂಟೆ, 53/1ಎ ರಲ್ಲಿ 25 ಗುಂಟೆ ಒಟ್ಟು 2 ಎಕರೆ 20 ಗುಂಟೆ ಜಮೀನು ಮತ್ತು ಸರ್. ಎಂ. ವಿಶ್ವೇಶ್ವರಯ್ಯ [illegible] ನೀಲಾದ್ರಿ, ಸ್ವರ್ಣ ಭಾರತಿ ಮತ್ತು ನಂದಿನಿ ಬಿ.ಡಿ.ಎ. ಬಡಾವಣೆಗಳಲ್ಲಿ ಒಟ್ಟು 111 ನಿವೇಶನಗಳನ್ನು ಹಂಚಿಕೆ ಮಾಡಿರು[illegible] ವಿಚಾರಣಾ ವರದಿ ಮತ್ತು ದಾಖಲಾತಿಗಳು ನೀಡಲು ಕೋರಿ ಪೊಲೀಸ್ ನೋಟಿಸ್ ಜಾರಿ ಮಾಡಿರುತ್ತೇನೆ.

ದಿನಾಂಕ [illegible]-2018 ರಂದು, [illegible] ಕಾರ್ಯಪಾಲಕ ಅಭಿಯಂತರರು, ದಕ್ಷಿಣ ವಿಭಾಗ, ಬಿ.ಡಿ.ಎ ಹಾಗೂ ಕಂದಾಯ ಅಧಿಕಾರಿ, [illegible] ವಿಚಾರಣೆಯಿಂದ ನಿಯಮಾನುಸಾರವಾಗಿ [illegible] ಸದರಿ ದೂರು ಅರ್ಜಿಯ ನಿವೇಶನ/ನಿವೇಶನಗಳು [illegible] ಜಮೀನಿಗೆ [illegible] ಎಂದು ಪೊಲೀಸ್ ನೋಟಿಸ್ ಮೂಲಕ ತಿಳಿಸಿರುತ್ತೇನೆ.

ದಿನಾಂಕ: 01-06-2018 ರಂದು, ಆರಕ್ಷಕ ಅಧೀಕ್ಷಕರು, [illegible] ಕಾರ್ಯನಿರತ ಪಡೆ ಮತ್ತು ಜಾಗೃತದಳ, ಬಿ.ಡಿ.ಎ, ಬೆಂಗಳೂರು ರವರಿಗೆ ಬಸ್ನಿಪೇಟೆ ನಿವಾಸಿಗಳ [illegible] ಬಿ.ಡಿ.ಎ ಜಮೀನು/ನಿವೇಶನಗಳನ್ನು ಹಂಚಿಕೆ ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ನಡೆಸಿರುವ [illegible] ವರದಿಯನ್ನು ದೃಢಿಕೃತ ದಾಖಲಾತಿಯನ್ನು ನೀಡಲು ಕೋರಿ ಪತ್ರವನ್ನು ಬರೆದಿರುತ್ತೇನೆ.

ದಿನಾಂಕ: 07-06-2018 ರಂದು, ಮಾನ್ಯ ಆಯುಕ್ತರು, ಬಿ.ಡಿ.ಎ. ಬೆಂಗಳೂರು ರವರಿಗೆ ಬಸ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ಬಿ.ಡಿ.ಎ ಜಮೀನು/ನಿವೇಶನಗಳನ್ನು [illegible] ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ನಡೆಸಿರುವ ವಿಚಾರಣಾ ವರದಿಯನ್ನು ದೃಢಿಕೃತ ದಾಖಲಾತಿಯನ್ನು [illegible] ಕೋರಿ ಪತ್ರವನ್ನು ಬರೆದಿರುತ್ತೇನೆ.

ದಿನಾಂಕ 20-05-2018 ರಂದು, ಆಯುಕ್ತರು, ಬಿಡಿಎ, [illegible]ಳೂರು ರವರು ನಾವು ಆರಕ್ಷಕ ಅಧೀಕ್ಷಕರು, ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತದಳ ಬಿ.ಡಿ.ಎ ಬೆಂಗಳೂರು ರವರಿಗೆ ಕೋರಿ ದೃಢಿಕೃತ ದಾಖಲಾತಿಯನ್ನು ತಮ್ಮ ಕಛೇರಿ ಪತ್ರ ಸಂಖ್ಯೆ: ಬೆಂ.ಅಪ್ರಾ/ಉಕಾ-[illegible]/2018-19 ರಂತೆ ನೀಡಿರುತ್ತಾರೆ.

<u>ದಿನಾಂಕ 25-06-2018 ರಂದು, ಸಹಾಯಕ ಕಾರ್ಯಪಾಲಕ ಅಭಿಯಂತರರು, ದಕ್ಷಿಣ ಉಪ-ವಿಭಾಗ,</u> ಬಿ.ಡಿ.ಎ. ರವರು, ತಮ್ಮ ಕಛೇರಿ ಪತ್ರ ಸಂಖ್ಯೆ: ಬೆಂ.ಅಪ್ರಾ/ಸಕಾ[illegible]/ಟ-153/2018-19 ರಂತೆ ಉಪ ಕಾರ್ಯದರ್ಶಿ-[illegible] ಹಂಚಿಕೆ ವಿಭಾಗ, ಬಿ.ಡಿ.ಎ. ಬೆಂಗಳೂರು ರವರಿಗೆ ಸದರಿ ದೂರಿಗೆ ಸಂಬಂಧಿಸಿದಂತೆ ವರದಿಯನ್ನು ನೀಡಲು ಕೋರಿರುವುದು ತಿಳಿಸಿರುತ್ತಾರೆ.

<u>ವಿಚಾರಣೆಯಿಂದ, ಹಾಗೂ ದಾಖಲಾತಿಗಳ ಪರಿಶೀಲನೆಯಿಂದ</u>

<u>ಈ ಕೆಳಕಂಡ ಅಂಶಗಳು ಬೆಳಕಿಗೆ ಬಂದಿರುತ್ತವೆ.</u>

1. ಸದರಿ ದೂರು ಅರ್ಜಿಯ ವಿಷಯಕ್ಕೆ ಸಂಬಂಧಿಸಿದಂತೆ, ಈಗಾಗಲೇ ಆರಕ್ಷಕ ಅಧೀಕ್ಷಕರು, ವಿಶೇಷ ಕಾರ್ಯನಿರತ ಪಡೆ ಮತ್ತು ಜಾಗೃತದಳ, ಬಿ.ಡಿ.ಎ, ಬೆಂಗಳೂರು ರವರು ವಿಚಾರಣೆಯನ್ನು ನಡೆಸಿ ಮಾನ್ಯ ಆಯುಕ್ತರು, ಬಿ.ಡಿ.ಎ ರವರಿಗೆ ವರದಿಯನ್ನು ನೀಡಿರುವುದು ಕಂಡುಬಂದಿದ್ದು [illegible] ವರದಿಯಲ್ಲಿ ಬಸ್ನಿಪೇಟೆ ನಿವಾಸಿಗಳ ಸೇವಾ ಸಂಘವು ಅಸ್ತಿತ್ವದಲ್ಲಿದ್ದು, ಸದರಿ ಸಂಘವು ಈ ಹಿಂದೆ [illegible]50,000 ರೂಪಾಯಿಗಳನ್ನು ಮುಂಗಡ ಹಣವಾಗಿ ಸಂದಾಯ ಮಾಡಿದ್ದು ಸಗಟು ಹಂಚಿಕೆ ಪಡೆಯಲು [illegible]ರುವುದಾಗಿ ತಿಳಿಸುವ ಅಂಶದ ಬಗ್ಗೆ ಕಂಡುಬಂದಿರುತ್ತದೆ.

- - - -

ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದಿಂದ ಪ್ರಾಧಿಕಾರಕ್ಕೆ 750 [illegible] ನಿವೇಶನಗಳನ್ನು ಮುಕ್ತವಾದ [illegible] ಹಣ ಸಂದಾಯವಾಗಿ ಅರ್ಜಿ ಸಲ್ಲಿಕೆಯಾಗಿದ್ದು [illegible] ಈಗಾಗಲೇ 80 ಇ.ಡಬ್ಲ್ಯೂ.ಎಸ್ ನಿವೇಶನಗಳನ್ನು ಹಂಚಿಕೆಮಾಡಿದ್ದು ಉಳಿಕೆ 670 [illegible] ನಿವೇಶನಗಳನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆಂದು ಬಿ.ಡಿ.ಎ ಪ್ರಾಧಿಕಾರದ [illegible] ಅಧಿಕಾರಿಗಳು ಅಭಿಪ್ರಾಯಪಟ್ಟಿರುವುದು ಕಂಡುಬಂದಿರುತ್ತದೆ.

3. ದಿನಾಂಕ: 09-11-2017 ರಂದು ನಡೆದ ಪ್ರಾಧಿಕಾರದ ಸಭೆಯ ಠರಾವು ಸಂಖ್ಯೆ [illegible]/17 ರಲ್ಲಿ ಬಿನ್ನಿ ಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಸಗಟು ಹಂಚಿಕೆ ಮಾಡುವ ವಿಷಯದ ಬಗ್ಗೆ ಪ್ರಸ್ತಾಪ ಮತ್ತು ಚರ್ಚೆ ನಡೆದು ಬಿನ್ನಿ ಪೇಟೆ ನಿವಾಸಿಗಳ ಸೇವಾ ಸಂಘವು ಕಾನೂನು ಅಧಿಕಾರಿಗಳ ಅಭಿಪ್ರಾಯದಂತೆ ಠರಾವು ಸಂಖ್ಯೆ 102/94 ರಲ್ಲಿ ನಿರ್ಣಯಿಸಿದಂತೆ 05 ಎಕರೆ 02 ಗುಂಟೆ ಜಮೀನನ್ನು ಸದರಿ ಸಂಘದವರಿಂದ ಪ್ರಾಧಿಕಾರದಲ್ಲಿ ಜಮೆ ಆದ 15,04,900 ಲಕ್ಷ ರೂಪಾಯಿಗಳನ್ನು ಹೊಂದಾಣಿಕೆ ಮಾಡಿಕೊಂಡು ಆರ್ಥಿಕ ವಿಭಾಗದವರ ಲೆಕ್ಕಾಚಾರದಂತೆ ಬಾಕಿ ಹಣವನ್ನು ಸಂದಾಯಿಸಿಕೊಂಡು ಬಿನ್ನಿ ಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಸಗಟು ಹಂಚಿಕೆ ಮಾಡಬಹುದೆಂಬ ಅಂಶದ ಬಗ್ಗೆ ಚರ್ಚೆ ನಡೆದಿದ್ದು, ಚರ್ಚೆಯ ನಂತರ ದಿನಾಂಕ: 30-10-2004 ರಂದು ಜರುಗಿದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ 225/2004 ರ ನಿರ್ಣಯವನ್ನು ಕಾಯ್ದಿರಿಸಿ ಲಭ್ಯತೆಯ ಆಧಾರದ ಮೇಲೆ 05 ಎಕರೆ 02 ಗುಂಟೆ ವಿಸ್ತೀರ್ಣದ ಜಮೀನನ್ನು/ನಿವೇಶನಗಳನ್ನು ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘದವರಿಗೆ ಪ್ರಾಧಿಕಾರದ ಆರ್ಥಿಕ ವಿಭಾಗದವರು ನಿಗದಿಪಡಿಸುವ ದರವನ್ನು ವಿಧಿಸಿ ಸಗಟಾಗಿ ನಿಯಮಾನುಸಾರ ಹಂಚಿಕೆ ಮಾಡಲು ನಿರ್ಣಯ ಮಾಡಿರುವ ಅಂಶ [illegible] ತಿಳಿದು ಬಂದಿರುತ್ತದೆ.

4. ದಿನಾಂಕ: 09-11-2017 ರಂದು ನಡೆದ ಪ್ರಾಧಿಕಾರದ ಸಭೆಯ ಠರಾವು ಸಂಖ್ಯೆ: 173/17 ರಂತೆ ಚರ್ಚೆ ನಡೆಸಿ ಕೈಗೊಂಡ ನಿರ್ಣಯದ ಆಧಾರದ ಮೇಲೆ ಬಿನ್ನಿಪೇಟೆ ನಿವಾಸಿಗಳ ಸೇವಾ ಸಂಘಕ್ಕೆ ಮಾಡಿರುವ ಹಂಚಿಕೆ ಪ್ರಕ್ರಿಯೆಯಲ್ಲಿ 1). ಎಸ್.ಎಂ. ಮಂಗಳ, ಉಪ-ಕಾರ್ಯದರ್ಶಿ, 2) [illegible] ಕಮಲ, ಮೇಲ್ವಿಚಾರಕರು, 3) ಬಿ.ವೆಂಕಟರಮಣಪ್ಪ, ವಿಷಯ ನಿರ್ವಾಹಕ ರವರುಗಳು ತಮ್ಮ ಕಾರ್ಯವ್ಯಾಪ್ತಿಗೆ ಸಂಬಂಧಪಟ್ಟಂತೆ ದೈನಂದಿನ ಕೆಲಸ ಕಾರ್ಯಗಳನ್ವಯ ಜವಾಬ್ದಾರಿ [illegible] ನಿಭಾಯಿಸಿರುವುದು ಕಂಡು ಬಂದಿರುತ್ತದೆ.

ವಿಚಾರಣೆಯಿಂದ ಕಂಡು ಬಂದ ಮೇಲಿನ [illegible] ಅನ್ವಯ, ಪ್ರಾಧಿಕಾರದ ಠರಾವು ಸಂಖ್ಯೆ 173/17 ರಂತೆ ಕೈಗೊಂಡ ನಿರ್ಣಯದಂತೆ, ನಿಯಮಾನುಸಾರವಾಗಿ ಬಿ.ಡಿ.ಎ ಅಧಿಕಾರಿಗಳಾದ ಬಿ.ವೆಂಕಟರಮಣಪ್ಪ, ಎಂ.ಬಿ. ಕಮಲ ಮತ್ತು ಎಸ್.ಎಂ. ಮಂಗಳ ರವರುಗಳು ಹಂಚಿಕೆ ಪ್ರಕ್ರಿಯೆಯಲ್ಲಿ ದೈನಂದಿನ ಕೆಲಸ ಕಾರ್ಯಗಳನ್ವಯದಂತೆ ಕರ್ತವ್ಯಗಳನ್ನು ನಿರ್ವಹಿಸಿರುವುದು ಕಂಡು ಬಂದಿರುವುದರಿಂದ, ಇವರುಗಳ ವಿರುದ್ಧ ಕಾನೂನು ರೀತಿಯ ಕ್ರಮ ಜರುಗಿಸುವ ಅವಕಾಶ ಇರುವುದಿಲ್ಲ. ಆದ್ದರಿಂದ ಮುಂದಿನ ಯಾವುದೇ ಕ್ರಮ ಅನುಸರಿಸದೇ ದೂರು ಅರ್ಜಿಯನ್ನು ಮುಕ್ತಾಯ ಮಾಡಬಹುದಾಗಿರುತ್ತದೆ.

ಆದ್ದರಿಂದ ಉಲ್ಲೇಖದ ದೂರು ಅರ್ಜಿಯನ್ನು ಮುಕ್ತಾಯ ಮಾಡಲು ಅನುಮೋದನೆಗಾಗಿ ವಿಚಾರಣಾ ವರದಿಯನ್ನು ಕಡತದೊಂದಿಗೆ ನಿವೇದಿಸಿಕೊಂಡಿರುತ್ತೇನೆ.

ದಿಲೀಪ್ ಡಿ. [illegible]
ಪೊಲೀಸ್ ಸಬ್ ಇನ್ಸ್‌ಪೆಕ್ಟರ್
ಬಿ.ಎಂ.ಟಿ.ಎಫ್ ಪೊಲೀಸ್ ಠಾಣೆ
ಬೆಂಗಳೂರು

ಮಾನ್ಯ ಎಡಿಜಿಪಿ ರವರಿಗೆ:-
ಪ್ರಶಾಂತ್ ಕುಮಾರ್ ಠಾಕೂರ್ ಐ.ಪಿ.ಎಸ್
ಅಪರ ಪೊಲೀಸ್ ಮಹಾನಿರ್ದೇಶಕರು
ಬೆಂಗಳೂರು ಮಹಾನಗರ ಕಾರ್ಯಪಡೆ
ಬೆಂಗಳೂರು

ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **820**
2. ಸದಸ್ಯರ ಹೆಸರು : ಶ್ರೀ ಅ. ದೇವೇಗೌಡ (ಪದವೀಧರರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 23.09.2021.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು.

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಸರ್ಕಾರಿ ನೌಕರರಿಗೆ 'ಆರೋಗ್ಯ ಸಂಜೀವಿನಿ' ಯೋಜನೆಯಡಿ ನಗದುರಹಿತ ಚಿಕಿತ್ಸೆ ನೀಡುವ ರೀತಿ ನಿವೃತ್ತ ನೌಕರರಿಗೂ 'ಆರೋಗ್ಯ ಸಂಜೀವಿನಿ' ಸೌಲಭ್ಯ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?	ರಾಜ್ಯದ ನಿವೃತ್ತ ಸರ್ಕಾರಿ ನೌಕರರುಗಳಿಗೆ ನಗದುರಹಿತ ವೈದ್ಯಕೀಯ ಚಿಕಿತ್ಸಾ ಸೌಲಭ್ಯ ಒದಗಿಸುವ ಕುರಿತಾದ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

e-ಕಡತ ಸಂಖ್ಯೆ: DPAR/99/SMR/2021

(ಬಸವರಾಜ ಬೊಮ್ಮಾಯಿ)

ಮುಖ್ಯಮಂತ್ರಿ